ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸಾಂಜಿ-ದಾರ

ಸಂಪುಟ : 7 ಸಂಚಿಕೆ : 3 ಪುಟ : 8 ಮಾರ್ಚ್-ಏಪ್ರಿಲ್-2013

## ಕಾರ್ಮಿಕರ ಕಣ್ಣಿಗೆ ಕಾಣದ ಮಾಲೀಕರು!!

*ಪ್ರಪಂಚದಾದ್ಯಂತ ಅಂತರರಾಷ್ಟ್ರೀಯ ಕಂಪನಿಗಳಿಗೆ ಉಡುಪು ತಯಾರಿಸುತ್ತಿರುವ ಸಹೋದ್ಯೋಗಿಗಳೇ.*

ವಿವಿಧ ಬ್ರಾಂಡ್‌ಗಳಿಗೆ ಬಟ್ಟೆ ತಯಾರಿಸುತ್ತಿರುವ ನಮಗೆ, ಕಾರ್ಮಿಕರಾಗಿ ನಾವು ದಿನನಿತ್ಯ ಅನುಭವಿಸುತ್ತಿರುವ ಶೋಷಣೆಗಳು ಚೆನ್ನಾಗಿಯೇ ತಿಳಿದಿದೆ. ನಮ್ಮ ಈ ಕಷ್ಟದ ಮೂಲವು ರಹಸ್ಯವಾಗೇನೂ ಉಳಿದಿಲ್ಲ: ನಮ್ಮ ಕೈಗಳು ಅಪಾರ ಸಂಪತ್ತನ್ನು ಸೃಷ್ಟಿಸಿದರೂ, ನಮಗೆ, ನಮ್ಮ ಕುಟುಂಬಕ್ಕೆ ಮತ್ತು ನಮ್ಮ ದೇಶಕ್ಕೆ ಸಿಗುತ್ತಿರುವುದು ಸಣ್ಣ ರೊಟ್ಟಿಯ ಚೂರಲ್ಲದೆ ಮತ್ತೇನೂ ಅಲ್ಲ. ನೂರು ವರ್ಷಗಳ ಹಿಂದೆ ಈ ಉದ್ಯಮಿಗಳು ಕಾರ್ಮಿಕರ ಬಗೆಗಿನ ತಮ್ಮ ಎಲ್ಲ ಹೊಣೆಗಾರಿಕೆಯನ್ನು ಮುಚ್ಚಿಟ್ಟು, ತಮ್ಮ ವಹಿವಾಟುಗಳನ್ನು ಬೇರೆ ದೇಶಗಳಿಗೆ ಹೊರಗುತ್ತಿಗೆಗೆ ಕೊಡಲು ಪ್ರಾರಂಭಿಸಿದಾಗಿನಿಂದಲೇ ನಮ್ಮ ಜೀವನ ಪರಿಸ್ಥಿತಿಯ ಮೌಲ್ಯವು ವೇಗವಾಗಿ ಇಳಿಮುಖವಾಯಿತು.

ಗುತ್ತಿಗೆದಾರರು, ಉಪಗುತ್ತಿಗೆದಾರರು, ಮತ್ತು ಸಬ್ಸಿಡಿದಾರರ ಕೊನೆಯಿಲ್ಲದ ಈ ಸರಣಿಯಲ್ಲಿ, ಲಾಭ ಮಾಡುವವರ ಮತ್ತು ಗ್ರಾಹಕರ ಕಣ್ಣಿಗೆ ನಮ್ಮನ್ನು ಸಂಪೂರ್ಣ ಅಗೋಚರವಾಗಿ ಉಳಿಸಲಾಗಿದೆ. ನಮ್ಮ ದಣಿದ, ಗಾಯವಾದ ಕೈಗಳು ಅವರ ಕಣ್ಣಿಗೆ ಕಾಣುವುದಿಲ್ಲ, ಹಸಿವಿನಿಂದ ಕೂಡಿದ ನಮ್ಮ ಮಕ್ಕಳ ಮುಖವನ್ನು ಅವರು ನೋಡುವುದಿಲ್ಲ. ದಿನಪೂರ್ತಿಯ ದುಡಿತ, ಅತಿಯಾದ ಉಷ್ಣತೆ, ಮತ್ತು ಅಪೌಷ್ಟಿಕತೆಯಿಂದ ನಾವು ನರಳುತ್ತಿರುವುದು, ಪ್ರಜ್ಞೆ ತಪ್ಪಿ ಬೀಳುತ್ತಿರುವುದು ಅವರ ಕಣ್ಣಿಗೆ ಕಾಣುವುದಿಲ್ಲ. ಹಲ್ಲೆಗೊಳಗಾದ, ಹೊಡೆತ ತಿಂದ ನಮ್ಮ ಸಹೋದ್ಯೋಗಿಗಳ ದೇಹಗಳನ್ನು ಅವರು ನೋಡುವುದಿಲ್ಲ. ಅವರು ನೋಡುವುದು ಉಡುಪಿನ ಮೇಲಿನ ಲೇಬಲ್‌ನಲ್ಲಿ ಕಾಣಿಸುವ ಸುಂದರ ಲೋಗೋ ಮತ್ತು ಅದರಲ್ಲಿ 'ಮೇಡ್ ಇನ್' ಎಂದು ಬರೆದಿರುವ ಅಪರಿಚಿತ ದೇಶದ ಹೆಸರನ್ನು ಮಾತ್ರ.

ಅಂತರರಾಷ್ಟ್ರೀಯ ಬ್ರಾಂಡ್‌ಗೆ ಕೆಲಸ ಮಾಡುವ ಬಾಂಗ್ಲಾ ದೇಶದ ಕಾರ್ಖಾನೆಯೊಂದರ ಬೆಂಕಿ ಅಪಘಾತದ ದುರದೃಷ್ಟ ಘಟನೆಯಲ್ಲಿ ಮೃತಪಟ್ಟ ಕಾರ್ಮಿಕರ ದೇಹಗಳನ್ನು ಅವರ ಸಂಬಂಧಿಕರು ಇನ್ನೂ ಎಣಿಸುತ್ತಿರುವ ಈ ಸಂದರ್ಭದಲ್ಲಿ, ವಿಶ್ವದ ಅತ್ಯುತ್ಕೃಷ್ಟ ಬ್ರಾಂಡ್‌ಗೆ ಕೆಲಸ ಮಾಡುವ ನಮ್ಮ ಸಹೋದ್ಯೋಗಿಗಳು ತಮ್ಮ ಜೀವ ರಕ್ಷಿಸಿಕೊಳ್ಳುವ ಸಲುವಾಗಿ, ತಾವು ಅನುಭವಿಸುತ್ತಿರುವ ಮಾನಸಿಕ ಹಿಂಸೆಯನ್ನ ತಪ್ಪಿಸಿಕೊಳ್ಳಲು ಚಾವಣಿಯಿಂದ ಜಿಗಿದು ಪ್ರಾಣ ಕಳೆದುಕೊಂಡದ್ದನ್ನು ನಾವು ಮರೆಯಲು ಸಾಧ್ಯವಿಲ್ಲದ ಈ ಸಂದರ್ಭದಲ್ಲಿ, ನಮ್ಮ ಹಕ್ಕುಗಳನ್ನು ಕಾಪಾಡುವ ಸಲುವಾಗಿ ಹೋರಾಡುತ್ತಿದ್ದ ಅಮಿನುಲ್ ಇಸ್ಲಾಂ ನಂತಹವರ ಹತ್ಯೆಗಾಗಿ ಕಣ್ಣೀರು ಮಿಡಿದು, ನಮ್ಮ ಕಣ್ಣುಗಳು ಒಣಗಿರುವ ಈ ಸಂದರ್ಭದಲ್ಲಿ, ಈ ಎಲ್ಲಾ ದುರಂತ ಪರ್ವವನ್ನು, ಜಾಗತಿಕ ಶೋಷಣೆಗಳನ್ನು ಕೊನೆಗಾಣಿಸಲು ಒಂದು ಅಂತರರಾಷ್ಟ್ರೀಯ ಮಟ್ಟದದ ಕ್ರಿಯಾ ಯೋಜನೆಗೆ ನಾವು ನಿಮಗೆ ಕರೆ ಕೊಡುತ್ತಿದ್ದೇವೆ. ನಮ್ಮನ್ನು ಶೋಷಿಸುತ್ತಿರುವ ಇದೇ ಜನ, ಜಾಗತಿಕ ಆರ್ಥಿಕ ಹಿಂಜರಿಕೆಯ ಈ ಪರಿಸ್ಥಿತಿಯಲ್ಲಿ ತಮ್ಮನ್ನು ತಾವೇ ಸಂಪದ್ಭರಿತಗೊಳಿಸಿಕೊಳ್ಳಲು, ಹಲವಾರು ವಿನಾಶಕಾರೀ ಕೃತ್ಯಗಳನ್ನು ಎಸಗುತ್ತಿದ್ದಾರೆ. ಈ ಸಂದರ್ಭದಲ್ಲಿ ನಮ್ಮನ್ನು ನಾವು ಸಮರ್ಥಿಸಿಕೊಳ್ಳಲು, ನವ ಉದಾರೀಕರಣದ ಸುಳ್ಳು ಭರವಸೆಗಳನ್ನು ತಿರಸ್ಕರಿಸಲು ನಾವೆಲ್ಲರೂ ಇಂದು ಎದ್ದು ನಿಲ್ಲಲೇ ಬೇಕಾಗಿದೆ. ಮತ್ತು ಈಗ ಆ ಸಮಯ ಬಂದಿದೆ.

ಈ ಸತ್ಯಗಳನ್ನು ಹೊರಗೆಡವುತ್ತಿರುವವರಲ್ಲಿ ನಾವು ಮೊದಲಿಗರಲ್ಲ, ಆದರೂ ಇದು ಇನ್ನು ಮುಂದುವರೆಯದಂತೆ ತಡೆಯುವವರಲ್ಲಿ ನಾವೂ ಒಬ್ಬರು. ಸಾಕು.

ಹಲವಾರು ಅನುಭವಗಳ ಕಲಿಕೆಯ ಹಿನ್ನೆಲೆಯಲ್ಲಿ, ಕಾರ್ಮಿಕರಾದ ನಾವು ಈ ಉದ್ಯಮದಲ್ಲಿ ಎದುರಿಸುತ್ತಿರುವ ಗಂಭೀರ ಸ್ವರೂಪದ ಶೋಷಣೆಯ ಹೊಣೆಯು, ನಮ್ಮ ಕಾರ್ಖಾನೆಗಳ ಮಾಲೀಕರದಾದರೂ, ಇವುಗಳ **ಹೊಣೆಗಾರಿಕೆಯು ಪ್ರಧಾನವಾಗಿ ಬಹುರಾಷ್ಟ್ರೀಯ ಬ್ರಾಂಡ್‌ಗಳದ್ದೇ ಎಂದು ನಾವು ಪ್ರತಿಪಾದಿಸುತ್ತಿದ್ದೇವೆ. ಹೌದು!!! ಏಕೆಂದರೆ, ಇಂದು ಜಾಗತಿಕ ಮಟ್ಟದಲ್ಲಿ ಉಡುಪುಗಳನ್ನು ಡಿಸೈನ್ ಮಾಡುತ್ತಿರುವುದು, ಅದನ್ನು ಕಾರ್ಯರೂಪಕ್ಕೆ ತರುತ್ತಿರುವುದು, ಉತ್ಪಾದನೆಯ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸಿ, ಅದನ್ನು ನಿಯಂತಿಸುತ್ತಿರುವುದು ಇವೇ ಬ್ರಾಂಡ್‌ಗಳು.** ಈ ಬ್ರಾಂಡ್‌ಗಳೇ ನಿಜವಾದ ಮಾಲೀಕರು, ನಿಜವಾದ ಯಜಮಾನರು ಮತ್ತು ನಿಜವಾದ ಶೋಷಕರು.



Scanned with OKEN Scanner



ನಮ್ಮ ದೇಶದ ಸರ್ಕಾರಗಳಿಗೆ ಈ ಬ್ರಾಂಡ್‌ಗಳು ನೀಡಿದ್ದ ಬೆಳವಣಿಗೆ ಮತ್ತು ಉದ್ಯೋಗದ ವಾಗ್ದಾನವು ಬಹು ದೂರವಾಗಿ, ಇಂದು ಪ್ರಪಂಚ ದಾದ್ಯಂತ ಮುಕ್ತ ವ್ಯಾಪಾರೀ ವಲಯಗಳಲ್ಲಿ ಉಳಿದಿರುವುದು ನೋವು, ದು:ಖ, ವೃತ್ತಿ ಸಂಬಂಧೀ ಖಾಯಿಲೆಗಳು, ವಿದ್ಯಾಭ್ಯಾಸ ವಂಚನೆ ಹಾಗೂ ಬಡತನ ಮಾತ್ರ. ಉಡುಪು ಉತ್ಪಾದನೆಯನ್ನು ವಿಕೇಂದ್ರೀಕರಣಗೊಳಿಸಿರುವ ಬ್ರಾಂಡ್‌ಗಳ ಈ ಮಾದರಿಯು, ಕಾರ್ಖಾನೆಗಳು ಒಬ್ಬರಿಗೊಬ್ಬರು ಪೈಪೋಟಿಗೆ ಬೀಳುವಂತೆ ಮಾಡುತ್ತಿವೆ. ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷೆಯನ್ನು ಅಲಕ್ಷಿಸಿ, ವೇತನಕ್ಕೆ ಹೊಡೆತ ಬೀಳುವಂತೆ ಕಾರ್ಮಿಕ ವೆಚ್ಚವನ್ನು ಕಡಿಮೆ ಮಾಡಿ, ಬಟ್ಟೆಗಳನ್ನು ಅತ್ಯಂತ ಅಗ್ಗದ ಬೆಲೆಗೆ ಉತ್ಪಾದಿಸಲು ಈ ಪೈಪೋಟಿಯು ಮಾಲೀಕರನ್ನು ಪ್ರಚೋದಿಸುತ್ತಿದೆ. ಬ್ರಾಂಡ್‌ಗಳು ತಮ್ಮ ಕೈಗಳನ್ನು ಎಂದೂ ಕೊಳೆಮಾಡಿಕೊಳ್ಳದೆ, ಒಂದು ಹೊಲಿಗೆ ಯಂತ್ರವನ್ನೂ ಸಹ ಮುಟ್ಟದೆ, ಈ ಉದ್ಯಮದಲ್ಲಿ ದೊಡ್ಡ ಪ್ರಮಾಣದ ಲಾಭವನ್ನು ಮಾತ್ರ ತಮ್ಮದಾಗಿಸಿಕೊಳ್ಳುವಂತಹ ಮಾದರಿಯನ್ನು ಸೃಷ್ಟಿಸಿಕೊಂಡಿವೆ. ಕಾರ್ಮಿಕರನ್ನು ಶೋಷಿಸುವ ಈ ಮಾದರಿಯಲ್ಲಿ ಬ್ರಾಂಡ್‌ಗಳು ದಿನೇ ದಿನೇ ಸಾವಿರಾರು ಕೋಟಿಗಳ ಲಾಭವನ್ನು ಸಂಗ್ರಹಿಸುತ್ತಿವೆ, ಆದರೆ ನಾವು, ಕಾರ್ಮಿಕರು ಮಾತ್ರ ಬಡತನದ ಜೀವನವನ್ನೇ ನಡೆಸುತ್ತಿದ್ದೇವೆ.

(ಏಳನೇ ಪುಟಕ್ಕೆ ಮುಂದುವರಿದಿದೆ)

**ಸೂಜಿ-ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : **ದು. ಸರಸ್ವತಿ**

ಸಂಪಾದಕರು : **ಪ್ರತಿಭಾ ಆರ್.**

ಸಲಹೆ-ಸಹಕಾರ: **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪದಾಧಿಕಾರಿಗಳು**

Registered with Registrar of Newspapers of India under No. KARKAN/2011/21668

**'SUJI-DARA',** REGD.No.: MAG(2) CR/PRB/32/11-12

ಈ ಸಂಚಿಕೆಯನ್ನು ಪ್ರಾಯೋಜಿಸಿದವರು

**ಡಾ. ಹೆಚ್.ಎಸ್. ಅನುಪಮ**

(ವೈದ್ಯರು, ಅಂಕಣಕಾರರು, ಬರಹಗಾರರು)

ಅವರಿಗೆ

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ**

**GATWU** ಧನ್ಯವಾದಗಳನ್ನು ಅರ್ಪಿಸುತ್ತಿವೆ.

## ಬೆಂಕಿ ಅಪಘಾತದಲ್ಲಿ ಮೃತಪಟ್ಟ ಸಹೋದರ/ಸಹೋದರಿಯರಿಗೆ ಶ್ರದ್ಧಾಂಜಲಿ

ಗಾರ್ಮೆಂಟ್ಸ್ ಕಾರ್ಮಿಕರ ಕೆಲಸದ ಶೋಚನೀಯ ಪರಿಸ್ಥಿತಿಗೆ ಬ್ರಾಂಡ್‌ಗಳು ಮುಖ್ಯ ಹೊಣೆಗಾರರು, ಎಂಬ ಅಭಿಪ್ರಾಯ ಕೇಳಿ ಬರುತ್ತಿರುವ ಈ ಹೊತ್ತಿನಲ್ಲೇ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ನಡೆಯುತ್ತಿರುವ ಸರಣಿ ಬೆಂಕಿ ಅಪಘಾತಗಳು ಎಲ್ಲರನ್ನು ಬೆಚ್ಚಿ ಬೀಳಿಸುತ್ತಿವೆ.

ಗೋಡೌನ್‌ಗಳಂತಿರುವ ಕಾರ್ಖಾನೆಗಳು ಹೊರ ಹೋಗಲು ಸರಿಯಾದ ದಾರಿಗಳಿಲ್ಲದ ಬಹು ಮಹಡಿ ಕಟ್ಟಡಗಳು, ಫೈರ್ ಇಂಜಿನ್‌ಗಳು ತಕ್ಷಣ ಜಾಗದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲದಂತಹ ಜನ ನಿಬಿಡ ಪ್ರದೇಶದಲ್ಲಿ ಕಾರ್ಖಾನೆಗಳನ್ನು ಮಾಡಿ ಕಾರ್ಮಿಕರನ್ನು ತುಂಬಿ ಕೆಲಸ ಮಾಡಿಸಲಾಗುತ್ತಿದೆ. ಬೆಂಕಿ ಅಪಘಾತಗಳಾದಾಗ ಬೆಂಕಿಯಿಂದ ಕೆಲವು ಕಾರ್ಮಿಕರು ತಮ್ಮ ಜೀವ ಕಳೆದುಕೊಂಡರೆ, ಅದಕ್ಕಿಂತ ಹೆಚ್ಚು ಮಂದಿ ಭಯಕ್ಕೆ ಮಹಡಿ ಮೇಲಿಂದ ಜಿಗಿದು ಪ್ರಾಣ ಕಳೆದುಕೊಂಡಿದ್ದಾರೆ.

ಬ್ರಾಂಡ್‌ಗಳು, ಮಾಲೀಕರು ತಮ್ಮ ಸ್ವಾರ್ಥದ ಲೋಭಕ್ಕಾಗಿ ಕಾರ್ಮಿಕರ ಜೀವಗಳನ್ನು ಪಣಕ್ಕಿಡುತ್ತಾರೆ. 2005ರಲ್ಲಿ ದೆಹಲಿಯಲ್ಲಿ ಇದೇ ರೀತಿಯ ಘಟನೆಯಲ್ಲಿ ಹಲವಾರು ಕಾರ್ಮಿಕರು ತಮ್ಮ ಪ್ರಾಣ ಕಳೆದುಕೊಂಡಿದ್ದರು.

ವಿಶ್ವದಾದ್ಯಂತ ತಮ್ಮ ಬ್ರಾಂಡ್‌ನ ಉಡುಪುಗಳನ್ನು ಹೆಮ್ಮೆಯಿಂದ ಸಾವಿರಾರು ರೂಗಳಿಗೆ ಮಾರುವ ಬ್ರಾಂಡ್‌ಗಳು, ಅದನ್ನು ಸಿದ್ಧಪಡಿಸುವ ಕಾರ್ಮಿಕರು ಇಂತಹ ಪ್ರಾಣಭೀತಿಯಿಂದ ಅಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡುತ್ತಿರುವುದರ ಬಗ್ಗೆ ಗಮನ ಹರಿಸಬೇಕು. ಈ ಪ್ರಕರಣಗಳ ಸಂಪೂರ್ಣ ಹೊಣೆ ಹೊತ್ತು ಸೂಕ್ತ ಪರಿಹಾರ ನೀಡಬೇಕು.

ಬಾಂಗ್ಲ, ಪಾಕಿಸ್ತಾನಗಳಲ್ಲಾದ ಈ ದುರಂತ ಘಟನೆಗಳಲ್ಲಿ ಮೃತಪಟ್ಟ ನಮ್ಮ ಸಹೋದರ/ಸಹೋದರಿಯರಿಗೆ *GATWU* ಮತ್ತು ಗಾರ್ಮೆಂಟ್ ಮಹಿಳಾ ಕಾರ್ಮಿಕರ ಮುನ್ನಡೆ ಈ ಮೂಲಕ ಶ್ರದ್ಧಾಂಜಲಿ ಅರ್ಪಿಸುತ್ತಿದೆ.





Scanned with OKEN Scanner



ಸಾಂದರ್ಭಿಕ ಚಿತ್ರ

# ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಕಾರ್ಖಾನೆಯ ಆಡಳಿತವರ್ಗದ ಕಾರ್ಮಿಕ ವಿರೋಧೀ ನೀತಿ

2011ರ ಜನವರಿಯಿಂದು ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್‌ನ ಕೆಲಸ ಬಿಟ್ಟ ಕಾರ್ಮಿಕರೊಬ್ಬರು ಹೇಳಿದರು, *"ನಾನು ಕೆಲಸ ಬಿಡಲು ಕಾರಣ ಮದುವೆ ಆದದ್ದು. ಏಕೆಂದರೆ ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಕಂಪನಿಯಲ್ಲಿ ಪ್ರತಿದಿನ ಬೆಳಿಗ್ಗೆ 9.30ರಿಂದ ರಾತ್ರಿ 2.00ಗಂಟೆಯವರೆವಿಗೂ ಮತ್ತು ಭಾನುವಾರವು ಸಹ ಕೆಲಸವಿರುತ್ತದೆ, ಮನೆಗೆ ಹೋಗಲು ಸಮಯವೇ ಇರುವುದಿಲ್ಲ. ಪ್ರತಿದಿನ ಸುಮಾರು 16 ಗಂಟೆಗಳ ಕಾಲ ಕೆಲಸ ಮಾಡಿಕೊಂಡು ಕಾರ್ಖಾನೆಯಲ್ಲೇ ಇರಬೇಕು, ಮನೆಯಲ್ಲಿ ಬೈಯುತ್ತಾರೆ ಆದುದರಿಂದ ಕೆಲಸ ಬಿಟ್ಟೆ"* ಎಂದು ತಿಳಿಸಿದರು.

ಈ ಕಂಪನಿ 2007ರಲ್ಲಿ ಪ್ರಾರಂಭವಾದಾಗಿನಿಂದ 2011ರ ವರೆವಿಗೂ ದಿನಕ್ಕೆ 14ರಿಂದ 16 ಗಂಟೆ ಸತತವಾಗಿ ಯಾವುದೇ ರಜೆ ಇಲ್ಲದೆ, ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು.

ಈ ಕಂಪನಿಯು ಅರವಿಂದ್ ಮಿಲ್‌ನ ಅಂಗ ಸಂಸ್ಥೆಯಾಗಿದ್ದು 2007–2008 ಮತ್ತು 2008–2009ರ ಬೋನಸ್‌ಅನ್ನು ಕಾರ್ಮಿಕರಿಗೆ ನೀಡದೇ ವಂಚಿಸಿತ್ತು. ಕಾರ್ಮಿಕರು ಸತತವಾಗಿ 14 ರಿಂದ 16 ಗಂಟೆ ಕೆಲಸ ಮಾಡಿದರೂ ಕಾಫಿ ಆಗಲಿ ಊಟದ ಭತ್ಯೆಯನ್ನಾಗಲೀ ಕಾರ್ಮಿಕರಿಗೆ ನೀಡಿರಲಿಲ್ಲ ಇ.ಎಸ್.ಐ. ಕಾರ್ಡ್ ಮತ್ತು ಪಿ.ಎಫ್.ನ ಮಾಹಿತಿಯನ್ನು ಕಾರ್ಮಿಕರಿಗೆ ನೀಡಿರಲಿಲ್ಲ. ಕಾರ್ಮಿಕರನ್ನು ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ತೆಗೆದುಹಾಕುವುದು, ಅತಿ ಕಡಿಮೆ ವೇತನಕ್ಕೆ ದುಡಿಸಿಕೊಂಡು ಒಂದು ರೀತಿಯ ಜೀತ ಕಾರ್ಮಿಕರಂತೆ ದುಡಿಸಿಕೊಳ್ಳುತ್ತಿದ್ದರು.

2010 ಡಿಸೆಂಬರ್‌ನಲ್ಲಿ ಕಾರ್ಖಾನೆಯನ್ನು ಸ್ಥಳಾಂತರಿಸಲಾಗುವುದೆಂದು ಎಲ್ಲಾ ಕಾರ್ಮಿಕರಿಗೂ ಮೌಖಿಕವಾಗಿ ತಿಳಿಸಿದ್ದರು. ತಕ್ಷಣ ಕಾರ್ಮಿಕರು ಸಂಘಟಿತರಾಗಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಮುಂದಾಳತ್ವದಲ್ಲಿ ಆಡಳಿತ ವರ್ಗದವರ ಜೊತೆ ದ್ವಿಪಕ್ಷೀಯ ಮತ್ತು ತ್ರಿಪಕ್ಷೀಯ ಮಾತುಕತೆಗಳ ಮೂಲಕ ಕಾರ್ಖಾನೆ ಸ್ಥಳಾಂತರಿಸುವುದನ್ನು ನಿಲ್ಲಿಸಲಾಯಿತು.

ಕಾರ್ಖಾನೆಯಲ್ಲಿ ಕಾರ್ಮಿಕ ಕಾನೂನುಗಳು ಅನುಷ್ಠಾನಗೊಳ್ಳುವಂತೆ ಕಾರ್ಮಿಕ ಇಲಾಖೆಯಲ್ಲಿ ತ್ರಿಪಕ್ಷೀಯ ಮಾತುಕತೆ ನಡೆದು, ಅಮಾನವೀಯವಾಗಿ ಮತ್ತು ಬಲವಂತವಾಗಿ ಮಾಡಿಸುತ್ತಿದ್ದ ಹೆಚ್ಚುವರಿ ಕೆಲಸವನ್ನು ನಿಲ್ಲಿಸಲಾಯಿತು, ಹೆಚ್ಚುವರಿ ಕೆಲಸದ ಸಂದರ್ಭದಲ್ಲಿ ಕೊಡಬೇಕಾಗಿದ್ದ ಊಟದ ಮತ್ತು ಕಾಫಿಯ ಹಣವನ್ನು ಕೊಡಿಸಲಾಯಿತು. 2007–2008 ಮತ್ತು 2008–2009ರ ಬೋನಸ್ ಅನ್ನು ಕೊಡಿಸಲಾಯಿತು, ಮತ್ತು ಹಂತ ಹಂತವಾಗಿ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರುವಂತೆ ತ್ರಿಪಕ್ಷೀಯ ಮಾತುಕತೆಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

**ಚಾರ್ಟರ್ ಆಫ್ ಡಿಮ್ಯಾಂಡ್**

ಮಾರ್ಚ್ 2012ರಂದು ಕಂಪನಿಗೆ, *GATWU* ವು ಚಾರ್ಟರ್ ಆಫ್ ಡಿಮ್ಯಾಂಡ್ ಅನ್ನು ಕಂಪನಿಗೆ ಕಳುಹಿಸಿತು. ಅದರಲ್ಲಿ ಮುಖ್ಯವಾಗಿ,

- ಕಾರ್ಮಿಕರಿಗೆ 6000 ರೂ ಮೂಲ ವೇತನ ಮತ್ತು ತುಟ್ಟಿ ಭತ್ಯೆ ಕೊಡಬೇಕು.
- ಪ್ರತಿ ವರ್ಷ ಇನ್‌ಕ್ರಿಮೆಂಟ್ ಆಗಬೇಕು. ☛ ಮನೆ ಬಾಡಿಗೆ ಭತ್ಯೆ ಕೊಡಬೇಕು.
- ಅಟೆಂಡೆನ್ಸ್ ಬೋನಸ್ ಕೊಡಬೇಕು. ☛ ಬಾಲವಾಡಿ ಪ್ರಾರಂಭಿಸಬೇಕು.
- ಯೂನಿಫಾರಂ ಕೊಡಬೇಕು. ☛ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಂಗಡ ಹಣ ಕೊಡಬೇಕು.
- ಷೂ, ಸಾಕ್ಸ್, ಗ್ಲೌಸ್, ಮಾಸ್ಕ್ ಕೊಡಬೇಕು. ☛ ಕ್ಯಾಂಟೀನ್ ಸೌಲಭ್ಯ ನೀಡಿ ರಿಯಾಯಿತಿ ದರದಲ್ಲಿ ಊಟ ಕೊಡಬೇಕು. ☛ ಕ್ಯಾಶುಯಲ್ ಲೀವ್ ಕೊಡಬೇಕು.
- ಕಾರ್ಖಾನೆ ಸಮಿತಿಗಳು ಮತ್ತು ಲೈಂಗಿಕ ಕಿರುಕುಳ ಸಮಿತಿ ರಚನೆ ಮಾಡಬೇಕು.

ಸತತ ಮೂರೂವರೆ ವರ್ಷಗಳ ಕಾಲ ಕಾರ್ಮಿಕರನ್ನು ಶೋಷಿಸಿದ್ದ ಆಡಳಿತವರ್ಗ ಕಾರ್ಮಿಕರು ಸಂಘಟಿತರಾದ ನಂತರ ಶೋಷಣೆ ಮಾಡಲು ಸಾಧ್ಯವಿಲ್ಲವೆಂದರಿತು ವಾಮಮಾರ್ಗದಿಂದ ಸಂಘಟನೆಯನ್ನು ಒಡೆಯಲು ಪ್ರಯತ್ನಿಸುತ್ತಿದೆ.

ಮೇಲಿನ ಎಲ್ಲಾ ಬೇಡಿಕೆಗಳ ಬಗ್ಗೆ ಪತ್ರವನ್ನು ಬರೆದಂದಿನಿಂದ ಕಾರ್ಮಿಕರ ಮೇಲೆ ಆಡಳಿತವರ್ಗದ ವಕ್ರದೃಷ್ಟಿ ಬಿದ್ದು ಅಂದಿನಿಂದಲೇ ಕಾರ್ಮಿಕರನ್ನು ಒಡೆದು ಆಳುವ ಬ್ರಿಟೀಷರ ನೀತಿಯನ್ನು ಅನುಸರಿಸಿ ಕಾರ್ಮಿಕರನ್ನು ಕಾರ್ಮಿಕರ ಮೇಲೆಯೇ ಎತ್ತಿ ಕಟ್ಟಿ ಜಗಳ ಮತ್ತು ಹಲ್ಲೆಯಂತಹ ನೀಚ ಕೆಲಸವನ್ನು ಮಾಡಿಸಿ ತನ್ನ ಭಂಡತನವನ್ನು ಬಹಿರಂಗಪಡಿಸಿದೆ. ಪೊಲೀಸ್ ಠಾಣೆಯಿಂದ ಯಾವುದೇ ರೀತಿ ರಕ್ಷಣೆಯಿಲ್ಲದಿರುವುದರಿಂದ ಕಾರ್ಮಿಕರು ಭಯದಿಂದ ಕೆಲಸ ಮಾಡುವಂತೆ ಆಗಿದೆ. ಅಲ್ಲದೆ ಅರವಿಂದ್ ಲೈಫ್ ಸ್ಟೈಲ್ ಬ್ರಾಂಡ್ ಲಿ. ಕಾನೂನು ಬಾಹಿರವಾಗಿ ತನ್ನ ನೌಕರರನ್ನು ಗುತ್ತಿಗೆದಾರರ ಕಡೆಯಿಂದ ನೇಮಿಸಿಕೊಂಡು ಕಾರ್ಮಿಕ ವರ್ಗಕ್ಕೆ ಅನ್ಯಾಯ ಮಾಡುತ್ತಿದೆ ಮತ್ತು ಕಾರ್ಮಿಕರ ಅಸಹಾಯಕತೆ ಬಡತನ, ನಿರುದ್ಯೋಗ, ಮತ್ತು ಕಾನೂನಿನ ಅಜ್ಞಾನವನ್ನು ದುರುಪಯೋಗ ಪಡಿಸಿಕೊಂಡು ಕಾರ್ಮಿಕರನ್ನು ವಂಚಿಸುತ್ತಿದೆ. *GATWU* ವು ಅರವಿಂದ್ ಲೈಫ್‌ಸ್ಟೈಲ್ ಬ್ರಾಂಡ್ ಲಿ.ನ ಆಡಳಿತ ವರ್ಗದ ಕಾರ್ಮಿಕ ವಿರೋಧೀ ನೀತಿಯ ಬಗ್ಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದು ಆಡಳಿತ ವರ್ಗದ ಮೇಲೆ ಒತ್ತಡ ತರಲು ಪ್ರಯತ್ನಿಸುತ್ತಿದೆ.

ಆಡಳಿತ ವರ್ಗವು ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಹಲವಾರು ಪ್ರಯತ್ನಗಳನ್ನು ಮಾಡಿದ್ದಾರೆ. ದಿನಾಂಕ: 3–01–2013 ರಂದು ಕಾರ್ಮಿಕ ನಾಯಕರೊಬ್ಬರಿಗೆ ಹಲ್ಲೆ ಮಾಡಿಸಿ ಜೊತೆಗೆ ದಿನಾಂಕ 11–01–2013ರಂದು ನಾಲ್ಕು ಜನ ಕಾರ್ಮಿಕರ ನಾಯಕರನ್ನು ಅಮಾನತುಗೊಳಿಸಿದರು. ಈ ಎಲ್ಲಾ ದೌರ್ಜನ್ಯವನ್ನು ಖಂಡಿಸಿ, ಕಾರ್ಖಾನೆಯ 30 ಜನ ಕಾರ್ಮಿಕರು ಧರಣಿ ನಡೆಸಿದ್ದರು. ಈ ಹಿನ್ನೆಲೆಯಲ್ಲಿ *GATWU*ವು ಅಮೆರಿಕಾದ ಸಂಘಟನೆಯಾದ WRC (ವರ್ಕರ್ಸ್ ರೈಟ್ಸ್ ಕನ್ಸೋರ್ಷಿಯಂ)ಅನ್ನು ಸಂಪರ್ಕಿಸಿ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಬೇಕೆಂದು ಮನವಿ ಮಾಡಿತು. ಅದರಂತೆ WRCಯ ಮಧ್ಯಸ್ಥಿಕೆಯಲ್ಲಿ, ಬ್ರಾಂಡ್‌ನಿಂದ ಘಟನೆಯ ತನಿಖೆ ನಡೆದು, ಪ್ರಾಥಮಿಕ ಹಂತವಾಗಿ ಕಾರ್ಮಿಕ ಮುಖಂಡರ ಅಮಾನತು ರದ್ದಾಗಿದೆ. ಸದ್ಯಕ್ಕೆ ಅವರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲ ವಿಷಯದ ಬಗ್ಗೆ WRCಯು ಕೂಲಂಕುಶ ತನಿಖೆ ನಡೆಸುತ್ತಿದೆ. ಕಾರ್ಮಿಕರು ಸಂಘಟಿತರಾಗಿ ತಮ್ಮ ಮೇಲಾದ ಅನ್ಯಾಯವನ್ನು ಪ್ರತಿಭಟಿಸಲು ಮುಂದಾದಾಗ ಕಂಪನಿಯ ಮೇನೇಜ್‌ಮೆಂಟ್ ಅನುಸರಿಸಿದ ಕಾರ್ಮಿಕ ವಿರೋಧಿನೀತಿಯನ್ನು *GATWU* ಖಂಡಿಸುತ್ತದೆ. □

### *ಅರವಿಂದ್ ಲೈಫ್‌ಸ್ಟೈಲ್ ಲಿ. ಕಾರ್ಮಿಕರಲ್ಲಿ GATWU ಮನವಿ*

*ಆಡಳಿತ ವರ್ಗದ ಆಮಿಷಕ್ಕೆ ಒಳಗಾಗಿ ನಮ್ಮ ನಮ್ಮಲ್ಲಿಯೇ ಜಗಳ ಮಾಡಿಕೊಂಡರೆ ಇದರಿಂದ ಲಾಭ ಆಡಳಿತ ವರ್ಗಕ್ಕೆ. ನಾವೆಲ್ಲರೂ ಅಕ್ಕ ಪಕ್ಕದ ಹಳ್ಳಿಯಿಂದ ದುಡಿಯಲು ಇಲ್ಲಿಗೆ ಬರುತ್ತಿದ್ದೇವೆ. ನಮ್ಮ ಸ್ನೇಹ-ಸಂಬಂಧಗಳೇ ಶಾಶ್ವತ. ಎಂದಿಗೂ ಆಡಳಿತ ವರ್ಗವು ಕಾರ್ಮಿಕರ ಒಗ್ಗಟ್ಟನ್ನು ಬಯಸುವುದಿಲ್ಲ. ದಯವಿಟ್ಟು ನಾವೆಲ್ಲ ಒಂದಾಗಿ ಹೋರಾಟ ಮಾಡಿದರೆ ಗೆಲುವು ನಮ್ಮದೇ ಆಗಿರುತ್ತದೆ. ಕ್ಷಣಿಕ ಸುಖಕ್ಕಾಗಿ ಕಾರ್ಮಿಕರು ತಮ್ಮ ವೈಯಕ್ತಿಕ ಸಂಬಂಧವನ್ನು ಹಾಳು ಮಾಡಿಕೊಳ್ಳಬಾರದೆಂದು GATWU ವು ಈ ಮೂಲಕ ಕಾರ್ಮಿಕರಲ್ಲಿ ಮನವಿ ಮಾಡಿಕೊಳ್ಳುತ್ತಿದೆ.*

| ಅರವಿಂದ್ ಲೈಫ್ ಸ್ಟೈಲ್ ಬ್ರಾಂಡ್ ಲಿ. ನ ವ್ಯಾಪಾರ ಮತ್ತು ಲಾಭ | | |
|---|---|---|
| 2010–2011 | ವಹಿವಾಟು | 420.2.ಕೋಟಿ |
| | ಲಾಭ | 10.23 ಕೋಟಿ |
| 2011–2012 | ವಹಿವಾಟು | 679.77ಕೋಟಿ |
| | ಲಾಭ | 13.26 ಕೋಟಿ |

*(ಕಂಪೆನಿಯ ವೆಬ್ ಸೈಟ್ ಮಾಹಿತಿ)*



Scanned with OKEN Scanner



# ಆರೋಗ್ಯ ಭಾಗ್ಯ

ಸೊಪ್ಪು, ತರಕಾರಿ, ಹಣ್ಣು, ಕಾಳು ಇತ್ಯಾದಿ ಆಹಾರ ಪದಾರ್ಥಗಳ ಮೂಲಕವೇ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ, ಮನೆಯಲ್ಲೇ ಜೀರಿಗೆ, ಮೆಣಸು, ಮೆಂತ್ಯೆ ಇತ್ಯಾದಿ ವಸ್ತುಗಳಿಗೆ ಸಣ್ಣ ಖಾಯಿಲೆ, ಕೊರತೆಗಳಿಗೆ ಔಷಧಿ ಮಾಡಿಕೊಳ್ಳುವ ಬಗ್ಗೆ ಡಾ. ವಸುಂಧರಾ ಭೂಪತಿಯವರು ಬರೆದಿರುವ ಪುಸ್ತಕಗಳು ಜನಪ್ರಿಯವಾಗಿವೆ. ಆಕಾಶವಾಣಿಯಲ್ಲಿ ಹಾಗು ದೂರದರ್ಶನದ ವಿವಿಧ ವೈದ್ಯಲೋಕ ಮಾಸ ಪತ್ರಿಕೆಯ ಸಂಪಾದಕರೂ ಆಗಿದ್ದಾರೆ. ಇವರ ಲೇಖನ, ಪುಸ್ತಕಗಳು ಇಂಗ್ಲಿಷ್ ಹಾಗೂ ಹಿಂದಿ ಭಾಷೆಗೆ ಅನುವಾದಗೊಂಡಿವೆ. ಕಳೆದ 26 ವರ್ಷಗಳಿಂದ ಅಸಂಖ್ಯಾಂತ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾ ಬಂದಿರುವ ಇವರು ಸ್ವಂತ ಕ್ಲಿನಿಕ್ ನಡೆಸುತ್ತಿದ್ದಾರೆ.



ಇನ್ನು ಮುಂದೆ ನಮ್ಮ 'ಸೂಜಿದಾರ'ದಲ್ಲೂ ಆರೋಗ್ಯ ಕುರಿತು ಬರೆಯಲು, ಸಲಹೆ ನೀಡಲು ಡಾ॥ ವಸುಂಧರಾ ಅವರು ಒಪ್ಪಿಕೊಂಡಿರುವುದು ಸಂತೋಷದಷ್ಟೇ ಗೌರವದ ವಿಷಯವೂ ಆಗಿದೆ. ಕಾರ್ಮಿಕರೆಲ್ಲರೂ ಆರೋಗ್ಯ ಕುರಿತು ಅವರ ಅಂಕಣವನ್ನು ತಪ್ಪದೇ ಓದಬೇಕು ಹಾಗೆಯೇ ಆರೋಗ್ಯ-ಅನಾರೋಗ್ಯ ಕುರಿತು ನಿಮಗಿರುವ ಪ್ರಶ್ನೆ, ಗೊಂದಲ, ಅನುಮಾನಗಳನ್ನು ಅವರೊಡನೆ ಕೇಳಬೇಕು ಎಂದು ಮನವಿ ಮಾಡಿಕೊಳ್ಳುತ್ತೇವೆ. ಗಂಟೆಗಟ್ಟಲೆ ಮಿಷಿನ್ನುಗಳಂತೆ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ಆರೋಗ್ಯವೆನ್ನುವುದು ದುಬಾರಿ ವಿಷಯವಾಗಿದೆ. ಅಲ್ಲದೆ ಅದು ಆದ್ಯತೆಯ ವಿಷಯವೂ ಆಗಿಲ್ಲ. ದುಡಿದು ಉಣ್ಣುವವರಿಗೆ ಆರೋಗ್ಯವೇ ಸಂಪತ್ತೆಂದು GATWU ಹಾಗೂ ಗಾರ್ಮೆಂಟ್ ಮಹಿಳಾ ಕಾರ್ಮಿಕರ ಮುನ್ನಡೆಯು ಭಾವಿಸಿ ಹಾಗು ಅದನ್ನು ಆದ್ಯತೆಯ ವಿಷಯವಾಗಿ ಪರಿಗಣಿಸುತ್ತದೆ. ಈ ನಿಟ್ಟಿನಲ್ಲಿ ಸಂಘಟನೆಯು ವಸುಂಧರಾ ಭೂಪತಿಯವರ ಸಹಕಾರದೊಂದಿಗೆ ಕೈಗೊಂಡಿರುವ ಪ್ರಯತ್ನವನ್ನು ಕಾರ್ಮಿಕರು ಬೆಂಬಲಿಸಬೇಕೆಂದು ಕೋರುತ್ತೇವೆ.

## ಮುಟ್ಟಿನ ತೊಂದರೆಗಳಿಗೆ

### 1. ಅನಿಯಮಿತ ಋತು ಚಕ್ರದ ತೊಂದರೆಗಳಿಗೆ

1. ಎಳ್ಳುಬೆಲ್ಲವನ್ನು ಕುಟ್ಟಿ ಉಂಡೆ ಮಾಡಿಟ್ಟು ಕೊಂಡು ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಉಂಡೆ ತಿಂದು ಹಾಲು ಕುಡಿಯಬೇಕು ಹೀಗೆ 15 ದಿನಗಳ ಕಾಲ ಮಾಡಬೇಕು.
2. ಲೋಳೆಸರದ ಒಳಗಿನ ತಿರುಳನ್ನು ಬೆಲ್ಲದೊಂದಿಗೆ ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ 15 ದಿನಗಳ ಕಾಲ ಸೇವನೆ ಮಾಡಬೇಕು.



*ಕರ್ನಾಟಕ ಲೇಖಿಕೆಯರ ಸಂಘದ ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಗೌರವ ಕಾರ್ಯದರ್ಶಿಗಳು, ಭ್ರೂಣ ಲಿಂಗಪತ್ತೆ ನಿಷೇಧ ಸಮಿತಿಯ ಸದಸ್ಯೆಯೂ ಆಗಿರುವ ಡಾ॥ ವಸುಂಧರಾ ಭೂಪತಿಯವರು ವೃತ್ತಿಯಲ್ಲಿ ಆಯುರ್ವೇದದ ವೈದ್ಯರಾಗಿದ್ದಾರೆ. ಹಲವಾರು ಜನಪರ, ಪ್ರಗತಿಪರ ಚಳುವಳಿಗಳ ಬೆಂಬಲಿಗರಾಗಿರುವ ಇವರಿಗೆ ಆರೋಗ್ಯವೆನ್ನುವುದು ಜನಪರ ಕಾಳಜಿಯ ವಿಷಯವಾಗಿದೆ. ವೈದ್ಯವೃತ್ತಿಯು ಲಾಭ ಮಾಡುವ ದಂಧೆ ಮತ್ತು ಆಸ್ಪತ್ರೆಗಳು ವ್ಯಾಪಾರ ಮಾಡುವ ಮಾಲುಗಳಾಗಿರುವಂತಹ ಸಂದರ್ಭದಲ್ಲಿ ಸರಳವಾಗಿ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಡಾ॥ ವಸುಂಧರಾ ಅವರು ಮಾಡುತ್ತಿರುವ ಪ್ರಯತ್ನಗಳು ಶ್ಲಾಘನೀಯ.*

*ಸೃಜನಶೀಲ ಸಾಹಿತ್ಯವೂ ಸೇರಿದಂತೆ ವೈದ್ಯಕೀಯ ಹಾಗೂ ಆರೋಗ್ಯದಂತಹ ವಿಷಯಗಳನ್ನೊಳಗೊಂಡು ಒಟ್ಟು 36 ಪುಸ್ತಕಗಳನ್ನು ಇವರು ಪ್ರಕಟಿಸಿದ್ದಾರೆ. ಹೆಚ್.ಐ.ವಿ. ಕುರಿತು ಇವರ ಲೇಖನಕ್ಕೆ 2007ರಲ್ಲಿ ಯೂನಿಸೆಫ್ ಪ್ರಶಸ್ತಿ ದೊರಕಿದೆ. ಆರೋಗ್ಯ ಹಾಗು ವಿಜ್ಞಾನದಂತಹ ವಿಷಯಗಳನ್ನು ಸರಳವಾದ ಭಾಷೆಯಲ್ಲಿ ಬರೆಯುವ ಇವರ ಅಂಕಣಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗಿವೆ/ವಾಗುತ್ತಿವೆ.*

### ಅತೀ ರಕ್ತ ಸ್ರಾವ : ಚಿಕಿತ್ಸೆ

1. ಅಶೋಕ ಚಕ್ಕೆಯನ್ನು ಕುಟ್ಟಿ ಪುಡಿ ಮಾಡಿ ಕಷಾಯ ತಯಾರಿಸಿ, ದಿನಕ್ಕೆರಡು ಬಾರಿ 15–20 ಮಿಲಿಯಷ್ಟು ಸೇವನೆ ಮಾಡಬೇಕು.
2. ಬಿಲ್ವಪತ್ರೆ ಕಾಯಿಯ ಒಳಗಿನ ತಿರುಳನ್ನು ಒಣಗಿಸಿ ಪುಡಿ ಮಾಡಿ ಒಂದು ಚಮಚೆಯಷ್ಟನ್ನು ಕಷಾಯ ತಯಾರಿಸಿ ಕಲ್ಲು ಸಕ್ಕರೆಯೊಂದಿಗೆ ದಿನಕ್ಕೆ ಮೂರು ಬಾರಿ ಕುಡಿಯಬೇಕು.
3. ಉತ್ತರಾಣಿರಸವನ್ನು ನಾಲ್ಕೈದು ಚಮಚೆಯಷ್ಟನ್ನು ದಿನಕ್ಕೆರಡು ಬಾರಿ ಖಾಲಿ ಹೊಟ್ಟೆಯಲ್ಲಿ 15–20 ದಿನಗಳ ಕಾಲ ಸೇವಿಸಬೇಕು.
4. ಬಾಳೇ ಹಣ್ಣು, ನೆಲ್ಲೀಕಾಯಿರಸ ಇಲ್ಲವೇ ಪುಡಿ, ಜೇನುತುಪ್ಪ ಮತ್ತು ಕಲ್ಲು ಸಕ್ಕರೆ ಬೆರೆಸಿ ಪ್ರತಿದಿನ ಬೆಳಗ್ಗೆ ಹಾಗೂ ರಾತ್ರಿ ಎರಡರಿಂದ ಮೂರು ವಾರ ಸೇವಿಸಬೇಕು.

### ಆಹಾರ

ಸಿಹಿ ರುಚಿಯುಳ್ಳ ಜಿಡ್ಡಿನಿಂದ ಕೂಡಿದ ಪಾಯಸ, ಗಂಜಿ, ಉಂಡೆಗಳ ಸೇವನೆ ಮಾಡಬೇಕು. ಬೂದುಕುಂಬಳಕಾಯಿಯ ತಿರುಳಿನ ರಸವನ್ನು ಒಣಖರ್ಜೂರದ ಬೀಜ ತೆಗೆದು ಸಣ್ಣ ತುಂಡುಗಳಾಗಿ ಮಾಡಿ ಜೇನುತುಪ್ಪದೊಂದಿಗೆ ಬೆರೆಸಿ ತಿನ್ನಬೇಕು. ಹಾಲು, ತುಪ್ಪ ಸೇವಿಸಬೇಕು. ಎಲ್ಲಾ ಬಗೆಯ ಸೊಪ್ಪು, ತರಕಾರಿ, ಮೊಳಕೆ ಕಾಳುಗಳು ಸೇವಿಸುವುದು ಅಗತ್ಯ.

ಅತೀ ರಕ್ತ ಸ್ರಾವದಿಂದ ನಿಶ್ಶಕ್ತಿಯಾಗಿ ರಕ್ತಹೀನತೆ ಉಂಟಾಗುತ್ತದೆ. ಇದನ್ನು ಅಲಕ್ಷಿಸದೆ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು.

ಋತುಬಂಧದ ನಂತರ ಅತಿ ರಕ್ತಸ್ರಾವ ಉಂಟಾದಲ್ಲಿ ಗರ್ಭಕೋಶದಲ್ಲಿ ಕ್ಯಾನ್ಸರ್ ಇರುವ ಸಂಭವವೂ ಇರುತ್ತದೆ. ಆದ್ದರಿಂದ ತಪಾಸಣೆ ಅತ್ಯಗತ್ಯ.

### ಮುಟ್ಟಿನ ಸಮಯದ ಹೊಟ್ಟೆ ನೋವು:

1. ಮುಟ್ಟಿನ ಸಮಯದಲ್ಲಿ ಮೂರು ದಿನ ಕಡಲೆಕಾಳಿನಷ್ಟು ಗಾತ್ರದ ಹಿಂಗನ್ನು ತುಪ್ಪದಲ್ಲಿ ಹುರಿದು ಬಿಸಿ ನೀರಿನಲ್ಲಿ ದಿನಕ್ಕೆ ಎರಡು ಇಲ್ಲವೆ ಮೂರು ಬಾರಿ ಸೇವಿಸಬೇಕು.
2. ಒಂದು ಚಮಚೆ ತುಂಬೆ ಮತ್ತು ನಿಂಬೆ ರಸಕ್ಕೆ ಚಿಟಿಕೆ ಉಪ್ಪು ಬೆರೆಸಿ ತಕ್ಷಣವೇ ಕುಡಿಯಬೇಕು. ಎದನ್ನು ಋತುಸ್ರಾವದ ಸಮಯದಲ್ಲಿ ಮೂರು ದಿನ ದಿನಕ್ಕೆರಡು ಬಾರಿ ಕುಡಿಯಬೇಕು.

### ಋತುಬಂಧ:

1. ನೆಲ್ಲಿಕಾಯಿ ರಸ ಇಲ್ಲವೇ ಪುಡಿಯನ್ನು ಒಂದು ಚಮಚೆ ಜೇನುತುಪ್ಪದೊಂದಿಗೆ ಬೆರೆಸಿ ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ಊಟಕ್ಕೂ ಮುಂಚೆ ಸೇವಿಸಬೇಕು.
2. ಇದನ್ನು 3 ತಿಂಗಳಿಂದ 6 ತಿಂಗಳು ಸೇವಿಸಬೇಕು.

❐

## ಸ್ನೇಹಿತರೇ, ಬನ್ನಿ ಮಂಗಳೂರಿನತ್ತ....

ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಕರ್ನಾಟಕದ ಸಮಾನ ಮನಸ್ಕ ಸಂಘಟನೆಗಳೆಲ್ಲವೂ "ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ" ಯಡಿ ಈ ಬಾರಿಯ ಮಹಿಳಾ ದಿನಾಚರಣೆಯನ್ನು ಮಂಗಳೂರಿನಲ್ಲಿ ಆಚರಿಸುತ್ತಿದೆ.

ಮಹಿಳೆಯರ ಮೇಲಿನ ಎಲ್ಲ ಹಿಂಸೆಗಳನ್ನು ವಿರೋಧಿಸುತ್ತಾ ಮಹಿಳಾ ಹೋರಾಟವನ್ನು ಮತ್ತೊಮ್ಮೆ ತೀವ್ರಗೊಳಿಸಬೇಕೆಂಬ ಉದ್ದೇಶದಿಂದ ಮಾರ್ಚ್ 6,7,8ರಂದು ಮಂಗಳೂರಿನಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ.

ಮಹಿಳಾ ಚಲನಚಿತ್ರೋತ್ಸವಗಳು, ವಿಚಾರ ಸಂಕಿರಣ, ಮಹಿಳೆಯರು ಮೌನ, ಶಾಂತಿಯಿಂದ ನಡೆಸುವ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಪ್ರತಿಭಟನೆ, ರ್‍ಯಾಲಿ, ಸಾರ್ವಜನಿಕ ಸಭೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ದಿನಾಂಕ 8ರಂದು ನಡೆಯುವ ಸಾರ್ವಜನಿಕ ಕಾರ್ಯಕ್ರಮದಲ್ಲಿ, ಕೆಲಸದ ಸ್ಥಳದಲ್ಲಿ ಮಹಿಳೆಯ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ತಡೆಗಟ್ಟುವಲ್ಲಿ ಸುಪ್ರೀಮ್‌ಕೋರ್ಟ್ ನೀಡಿರುವ ಮಹತ್ವದ ತೀರ್ಪು ಬರಲು ಕಾರಣರಾದ ಹೋರಾಟಗಾರ್ತಿ ಶ್ರೀಮತಿ ಭಾನ್ವರೀದೇವಿಯವರು ಭಾಗವಹಿಸುತ್ತಿದ್ದಾರೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಸಹ ಈ ಬಾರಿಯ ಮಹಿಳಾ ದಿನಾಚರಣೆಯನ್ನು ಮಂಗಳೂರಿನಲ್ಲಿ ಆಚರಿಸುತ್ತಿದ್ದು ತಮ್ಮೆಲ್ಲರಿಗೂ ಈ ಮೂಲಕ ಆಹ್ವಾನ ನೀಡುತ್ತಿದ್ದೇವೆ.

*ದಯವಿಟ್ಟು ಎಲ್ಲರೂ ಬನ್ನಿ*

### GATWU ವಿನ ನೂತನ ಪೀಣ್ಯ ಶಾಖೆಯ ಕಛೇರಿ ಪ್ರಾರಂಭ

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಪೀಣ್ಯದಲ್ಲಿ ತನ್ನ ನೂತನ ಕಛೇರಿಯನ್ನು ಆರಂಭಿಸಿದೆ. ಈ ಪ್ರದೇಶದ ಕಾರ್ಮಿಕರೆಲ್ಲರೂ ಕಾರ್ಖಾನೆಗೆ ಸಂಬಂಧಪಟ್ಟ, P.F., ಹಾಗೂ E.S.I.ಗೆ ಸಂಬಂಧಪಟ್ಟ ಯಾವುದೇ ಸಮಸ್ಯೆಗಳಿಗೆ GATWU ಕಛೇರಿಯನ್ನು ಈ ವಿಳಾಸದಲ್ಲಿ ಸಂಪರ್ಕಿಸಿ:

ನಂ.13, ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು-560 073. ಮೊ: 9844714476

### ಪ್ರಕಟಣೆ

ಕ್ರಿಮ್‌ಸನ್ ಕ್ಲಾತಿಂಗ್ ಪ್ರೈ.ಲಿ. 320/4, ಮೈಸೂರು ರಸ್ತೆ, ಬೆಂಗಳೂರು, ಕಾರ್ಮಿಕರಿಗೆ ಈ ಮೂಲಕ ತಿಳಿಸುತ್ತಿರುವುದೇನೆಂದರೆ, ಈ ಕಾರ್ಖಾನೆಯನ್ನು ದಿನಾಂಕ 5-3-2007ರಂದು ಮುಚ್ಚಲಾಗಿತ್ತು. ಈ ಸಂಬಂಧ GATWUವು ಕಾರ್ಮಿಕ ನ್ಯಾಯಾಲಯದಲ್ಲಿ ಕಾರ್ಮಿಕರ ಪರವಾಗಿ ಹೋರಾಟ ನಡೆಸಿಕೊಂಡು ಬರುತ್ತಿತ್ತು.

ದಿನಾಂಕ: 30-1-2013 ರಂದು ಈ ಕೇಸ್ ತೀರ್ಮಾನವಾಗಿದ್ದು, ಆಡಳಿತವರ್ಗವು ಪರಿಹಾರವಾಗಿ 3,50,000 ರೂ. (ರೂ. ಮೂರೂವರೆ ಲಕ್ಷ ಮಾತ್ರ)ಗಳನ್ನು ನೀಡಿರುತ್ತದೆ. GATWUವು ಈಗಾಗಲೇ ಈ ಬಗ್ಗೆ ಮೌಖಿಕ ಸೂಚನೆ ನೀಡಿದ್ದು, ಹಲವಾರು ಕಾರ್ಮಿಕರು ತಮ್ಮ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ.

ಕ್ರಿಮ್‌ಸನ್ ಕ್ಲಾತಿಂಗ್ ಪ್ರೈ.ಲಿ. ಮುಚ್ಚುವ ಸಂದರ್ಭದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು, ಆ ಕಾರ್ಖಾನೆಯ ID ಕಾರ್ಡ್, ಹಾಗೂ ವೇತನ ಚೀಟಿಯೊಂದಿಗೆ ಬಂದು GATWUವನ್ನು ಸಂಪರ್ಕಿಸಬೇಕಾಗಿ ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

## ಗಾರ್ಮೆಂಟ್ಸ್ ಕಾರ್ಖಾನೆಗಳ ನಿಜರೂಪ ಅನಾವರಣಗೊಳಿಸಿದ 'ಸೀಮಾ ಮಸೂತಿ' ಸಮಿತಿ ವರದಿ

"ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ದಿನಕ್ಕೆ 300 ರಿಂದ 350 ರೂ. ವೇತನ ನಿಗದಿ ಪಡಿಸಬೇಕು."

ಕಾರ್ಮಿಕರ ಯೂನಿಯನ್‌ಗಳು ಸರ್ಕಾರಕ್ಕೆ ಆಗ್ರಹಿಸಿ ಕೇಳುವ ಮಾತನ್ನು, ಸ್ವತಃ ವಿಧಾನ ಸಭಾ ಸಚಿವಾಲಯದ "ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ"ಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕರ್ನಾಟಕ ವಿಧಾನ ಸಭಾ ಸಚಿವಾಲಯವು ರಚಿಸಿರುವ "ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ" 2012ರಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಕೆಲಸದ ಪರಿಸ್ಥಿತಿಯನ್ನು ಅವಲೋಕಿಸಿ ಮಹಿಳಾ ಕಾರ್ಮಿಕರ ಉತ್ತಮ ಸ್ಥಿತಿಗತಿಗಾಗಿ ಸರ್ಕಾರಕ್ಕೆ ಕೆಲವು ಶಿಫಾರಸುಗಳನ್ನು ಮಾಡಿದೆ. ವಿಧಾನಸಭಾ ಸದಸ್ಯರಾದ ಶ್ರೀಮತಿ ಸೀಮಾ ಅಶೋಕ ಮಸೂತಿಯವರ ಅಧ್ಯಕ್ಷತೆಯಲ್ಲಿ ಈ ಸಮಿತಿಯು 2012 ರ ಡಿಸೆಂಬರ್‌ನಲ್ಲಿ ಹೊಂಗಸಂದ್ರ ಹಾಗೂ ಯಶವಂತಪುರದ ಎರಡು ಗಾರ್ಮೆಂಟ್ ಕಾರ್ಖಾನೆಗಳಿಗೆ ಅನಿರೀಕ್ಷಿತ ಭೇಟಿ ನೀಡಿತ್ತು.

ಕಾರ್ಮಿಕರ ಕನಿಷ್ಠವೇತನ ಹೆಚ್ಚಳವೂ ಸೇರಿದಂತೆ, ಕಾರ್ಮಿಕರ ಕುಳಿತುಕೊಳ್ಳುವ ವ್ಯವಸ್ಥೆ, ಅನಧಿಕೃತವಾಗಿ ಓ.ಟಿ ಮಾಡಿಸುತ್ತಿರುವುದರ ಬಗ್ಗೆ, ಗ್ರಾಚುಟಿ ವಂಚನೆ, ಬೋನಸ್ ವಂಚನೆ, ಕ್ಯಾಂಟೀನ್ ವ್ಯವಸ್ಥೆ, ಮಹಿಳೆಯರ ಆರೋಗ್ಯ ಇತ್ಯಾದಿಗಳ ಬಗ್ಗೆ ಈ ಸಮಿತಿಯು ಬೆಳಕು ಚೆಲ್ಲಿದ್ದು, ಇವುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸರ್ಕಾರವೇ ರಚಿಸಿದ ಸಮಿತಿಯೊಂದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ವೇತನ ದಿನಕ್ಕೆ 350 ಇರಬೇಕೆಂದು ಶಿಫಾರಸು ಮಾಡಿರುವುದು, ಯೂನಿಯನ್‌ಗಳ ಹೋರಾಟಕ್ಕೆ ಒಂದು ಗಟ್ಟಿ ನೆಲೆಯನ್ನು ಒದಗಿಸಿದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಲೇಬೇಕಾಗಿದೆ.

### ಕಾರ್ಮಿಕರಲ್ಲಿ ಮನವಿ

ಆತ್ಮೀಯರೇ, ಇದು ನಿಮ್ಮ ಪತ್ರಿಕೆ, ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ಪತ್ರಿಕೆಯನ್ನು ದುಡ್ಡು ಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

*-ಸಂ.ಮಂ.*



Scanned with OKEN Scanner



# ಪುಸ್ತಕ ಪರಿಚಯ

*ಕನ್ನಡ ಸಾಹಿತ್ಯ ಲೋಕವು ಬಹಳ ಉನ್ನತವಾದುದ್ದು, ಗಾರ್ಮೆಂಟ್ ಕಾರ್ಮಿಕರು ಪ್ರತಿ ತಿಂಗಳು ಒಂದು ಪುಸ್ತಕವನ್ನು ಓದಿ ತಮ್ಮ ಅಭಿಪ್ರಾಯವನ್ನು ಇಲ್ಲಿ ಬರೆಯುತ್ತಿದ್ದಾರೆ. ದಯವಿಟ್ಟು ಓದಿ ತಮ್ಮ ಅನಿಸಿಕೆ/ ಅಭಿಪ್ರಾಯಗಳನ್ನು ತಿಳಿಸಿ. ಈ ಸಲದ ಲೇಖನವನ್ನು ಶ್ರೀಮತಿ ನೇತ್ರಾವತಿಯವರು ಬರೆದಿದ್ದಾರೆ.*

ಡಾ|| ಸಬೀಹಾ ಭೂಮಿಗೌಡ ಅವರು ಬರೆದಿರುವ ಕಥಾಸಂಕಲನ **"ಕದಲತಡಿಯ ಮನೆ"** ಎಂಬ ಕಥಾಸಂಕಲನದಲ್ಲಿ ಒಟ್ಟು ಹನ್ನೊಂದು ಕತೆಗಳಿವೆ. ಈ ಕಥೆಗಳಲ್ಲಿ ಭಾಷೆಯು ಸರಳವಾಗಿದೆ. ಕಥೆಯ ವಿಷಯಗಳು ಹೆಣ್ಣುಮಕ್ಕಳ ಬದುಕಿಗೆ ಹತ್ತಿರವಾದಂತಹವು. ಮನ ಮುಟ್ಟುವಂತೆ ಬರೆದಿರುವುದರಿಂದ ಕತೆಗಳು ಆಪ್ತವೆನಿಸುತ್ತವೆ.

**"ಎತ್ತಣಿಂದೆತ್ತಣ"** ಕತೆಯಲ್ಲಿ ಇಬ್ಬರು ಮಹಿಳೆಯರು ಬೇರೆ ಬೇರೆ ಜಾತಿಗೆ ಸೇರಿದರೂ, ಸಂಪ್ರದಾಯಸ್ಥರಾದರೂ ಆಪ್ತ ಸಂಬಂಧವನ್ನು ಹೊಂದಿರುವ ಮಹಿಳೆಯ ಕತೆ ಇದಾಗಿದೆ. ಅವರಿಬ್ಬರ ನಡುವಿನ ಸ್ನೇಹ ಅದೆಷ್ಟು ಗಾಢವೆಂದರೆ ಇಳಿವಯಸ್ಸಿನಲ್ಲಿ ಸರಿಯಾಗಿ ನೋಡಿಕೊಳ್ಳುವವರು ಯಾರೂ ಇಲ್ಲವೆಂದು ಮುಸ್ಲಿಂ ಗೆಳತಿಯನ್ನು ಹಿಂದು ಗೆಳತಿ ತಾನೇ ಕರೆದುಕೊಂಡು ಹೋಗುತ್ತಾಳೆ. ಈ ಕತೆಯನ್ನು ಓದಿದಾಗ ನಾನು ಹಾಗು ನನ್ನ ಆಪ್ತ ಗೆಳತಿ ಮದೀನಾಳ ಸ್ನೇಹ ನೆನಪಾಯಿತು

**"ಒಂದು ಸಾವಿನ ಸುತ್ತ"** ಕತೆಯಲ್ಲಿ ಬದುಕಿನ ಬಗ್ಗೆ ಹಲವು ಕನಸುಗಳಿದ್ದ ಶಮೀಮಳಿಗೆ ಮದುವೆಯಾದ ನಂತರ ತನ್ನ ಗಂಡ ನಪುಂಸಕನೆಂದು ತಿಳಿಯುತ್ತದೆ. ಆತ ಸುಳ್ಳು ಹೇಳಿ ಅವಳನ್ನು ಮದುವೆಯಾಗಿರುತ್ತಾನೆ, ಗಂಡನ ಸುಳ್ಳಿನಿಂದ ತನ್ನ ಕನಸೆಲ್ಲ ಚೂರಾಗಿ ಶಮೀಳಳು ಪಡುವ ಸಂಕಟವನ್ನು ಕತೆಯಲ್ಲಿ ಮನ ಮುಟ್ಟುವಂತೆ ಬರೆದಿದ್ದಾರೆ.

**"ಬಳೇ"** ಎಂಬ ಕತೆಯಲ್ಲಿ ಗಂಡ ತೀರಿಹೋದ 11ನೇ ದಿನಕ್ಕೆ ಬಳೆ ಒಡೆಯುವ ಪ್ರಸಂಗ ಬರುತ್ತದೆ. ಈ ಸಂದರ್ಭದಲ್ಲಿ ಇನ್ನೂ ಬಳೆ ಹಾಕುವಂತಿಲ್ಲವೆಂದು ಹಾಕಿಕೊಂಡಿದ್ದ ಗಾಜಿನ ಬಳೆಗಳನ್ನು ಒಡೆಯುವುದು ನೋವಿನ ವಿಷಯವಾಗಿತ್ತು. ಹೆಣ್ಣುಮಕ್ಕಳಿಗೆ ಇನ್ನು ಮುಂದೆ ತಮ್ಮ ತಾಯಿಯು ಗಾಜಿನ ಬಳೆ ತೊಡುವಂತಿಲ್ಲವಾದ್ದರಿಂದ ಚಿನ್ನದ ಬಳೆಯನ್ನು ಗಂಡುಮಕ್ಕಳಿಗೆ ತಾಯಿಗೆ ಬಳೆ ಮಾಡಿಸಿಕೊಡು ಎಂದು ಹೆಣ್ಣುಮಕ್ಕಳು ಒತ್ತಾಯಿಸಿದಾಗ ಆ ಗಂಡು ಮಕ್ಕಳು ಮಾಡಿಸಿಕೊಡಲು ಇಷ್ಟ ಪಡುವುದಿಲ್ಲ. (ಕಾರಣ ಈ ಬಳೆ ಮಾಡಿಸಿಕೊಟ್ಟರೆ ಮುಂದೆ ತಾಯಿ ತೀರಿಕೊಂಡ ನಂತರ ಆ ಬಳೆಗಳು ಹೆಣ್ಣುಮಕ್ಕಳಿಗೆ ಸೇರುತ್ತವೆ ಎಂಬ ಲೆಕ್ಕಾಚಾರದಿಂದಾಗಿ) ಗಂಡುಮಕ್ಕಳು ಹಿಂದು ಮುಂದು ನೋಡುತ್ತಾರೆ.

**"ಸಂವೇದನೆ"** ಕತೆ ಅಪ್ಪ ಮಗಳನ್ನು ಕುರಿತದ್ದು. ಬಾಲ್ಯದಲ್ಲಿ ಅತ್ಯಂತ ಆಪ್ತವಾಗಿದ್ದ ತಂದೆಯೊಳಗಿನ ಸಂಬಂಧ ಅತ್ಯಂತ ಪ್ರೀತಿಯಿಂದ ಕೂಡಿದ ಹದಿ ವಯಸ್ಸಿನಲ್ಲಿ ಬದಲಾಗಿಬಿಡುವುದರ ಚಿತ್ರಣವಿದೆ, ಶಾಲೆಯ ಟೀಚರ್ ಹೆಣ್ಣುಮಕ್ಕಳು ಹೇಗೆ ಇರಬೇಕು ಹೇಗೆ ಇರಬಾರದು ಏನನ್ನು ಮಾಡಬೇಕು ಏನನ್ನು ಮಾಡಬಾರದು ಎಂದು ಹೇಳಿಕೊಡುವ ನಿಯಮಗಳನ್ನು ಆಪ್ತವಾಗಿರುವ ಅಪ್ಪನು ಹೇಳಿಕೊಟ್ಟಿದ್ದು ಆಕೆಯ ಮನಸ್ಸಿನಲ್ಲಿ ಭಯ ಗೊಂದಲಗಳನ್ನು ಹುಟ್ಟಿಸುತ್ತದೆ.

ಅತ್ಯಂತ ಪ್ರೀತಿ ಪಾತ್ರನಾದ ಅಪ್ಪನೇ ಭಯ, ಕಾನೂನು, ಶಿಕ್ಷೆಯ ಸಂಕೇತದಂತೆ ಕಾಣಿಸಿ ನಿಗೂಢ ಎನಿಸಿಬಿಡುತ್ತಾನೆ. ಈ ಭಾವನೆಗಳನ್ನು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ.

"ಸಂಬಂಧ" ಕತೆಯಲ್ಲಿ ಜಾತಿ ಧರ್ಮ ಆಸ್ತಿಯನ್ನು ಮೀರಿ ಸಂಬಂಧವನ್ನಷ್ಟೇ ದೊಡ್ಡದಾಗಿ ನೋಡುವ ಹೆಣ್ಣು ಮಗಳ ಕತೆಯಿದು, ಮದುವೆಯಾಗಿರುವ ಅನ್ಯಧರ್ಮದ ಕಾರಣಕ್ಕೆ ನಿಂದನೆ ಅವಮಾನಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಹೀಗೆ ಈ ಪುಸ್ತಕದಲ್ಲಿರುವ ಎಲ್ಲಾ ಕತೆಗಳು ಮಹಿಳೆಯರ ಬದುಕಿಗೆ ಸಂಬಂಧ ಪಟ್ಟಿವೆ. ಓದುತ್ತಿದ್ದರೆ ಇದ್ಯಾವುದು ಕಲ್ಪನೆ, ಸಿನಿಮಾ ಕತೆ, ಎಂದು ಅನಿಸದೇ ನಮ್ಮ ಸುತ್ತ ಮುತ್ತಲಿನ ಮತ್ತು ಬದುಕಿನ ಕತೆ ಎನಿಸುತ್ತದೆ. ಅಷ್ಟು ಚೆನ್ನಾಗಿ ಮನ ಮುಟ್ಟುವಂತೆ ಡಾ|| ಸಬೀಹಾ ಭೂಮಿಗೌಡರು ಕತೆಗಳನ್ನು ಬರೆದಿರುತ್ತಾರೆ.

ಈ ಪುಸ್ತಕವನ್ನು ಲಡಾಯಿ ಪ್ರಕಾಶನದವರು ಪ್ರಕಟಿಸಿದ್ದಾರೆ, ಈ ಪುಸ್ತಕವು ನಮ್ಮ ಗಾ.ಮ.ಕಾ. ಮುನ್ನಡೆ ಲೈಬ್ರರಿಯಲ್ಲಿ ಇದೆ. ಆಸಕ್ತಿ ಇರುವವರು ದಯವಿಟ್ಟು ಓದಬೇಕು ಓದಿ ತಮ್ಮ ಅಭಿಪ್ರಾಯಗಳನ್ನು ನಮ್ಮ ಸಂಘಟನೆಯ ಬೆಂಬಲಿಗರಾಗಿರುವ ಸಬೀಹಾರವರಿಗೆ ತಿಳಿಸಬಹುದು.

■ **ಡಾ|| ಸಬೀಹಾ ಭೂಮಿಗೌಡ**
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಂಗಳೂರು ವಿಶ್ವವಿದ್ಯಾಲಯ, ಕೊಣಾಜೆ, ಮಂಗಳೂರು.

□

## ಬಂಗಾರಪ್ಪ ನಗರದಲ್ಲಿ ಕನ್ನಡ ಕಲಿಕಾ ಶಿಬಿರ



**ದಿನಾಂಕ 06-01-2013 ರಂದು ಬಂಗಾರಪ್ಪ ನಗರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಗಾರ್ಮೆಂಟ್ ಮಹಿಳಾ ಕಾರ್ಮಿಕರ ಮುನ್ನಡೆಯು ಕನ್ನಡ ಕಲಿಕಾ ಶಿಬಿರವನ್ನು ಉದ್ಘಾಟಿಸಲಾಯಿತು.**

**ಕಳೆದ ಮೂರು ವರ್ಷಗಳಿಂದ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಕನ್ನಡ ಕಲಿಕಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸುತ್ತ ಬರುತ್ತಿದೆ.**

**ಕಾರ್ಮಿಕರಿಗೆ ಕನ್ನಡ ಕಲಿಯಲು ಅವಕಾಶ ಮಾಡಿಕೊಡುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಗಾರ್ಮೆಂಟ್ ಮಹಿಳಾ ಕಾರ್ಮಿಕರ ಮುನ್ನಡೆಯು ಈ ಮೂಲಕ ಧನ್ಯವಾದಗಳನ್ನು ತಿಳಿಸುತ್ತಿದೆ.**



Scanned with OKEN Scanner

# ಕಾರ್ಮಿಕರ ಕಣ್ಣಿಗೆ ಕಾಣದ ಮಾಲೀಕರು!!!!

(1ನೇ ಪುಟದಿಂದ)

ನಾವು, ಪ್ರಪಂಚದಾದ್ಯಂತ 'ಮುಕ್ತ ವ್ಯಾಪಾರೀ ವಲಯ' ಅಥವಾ ಎಕ್ಸ್‌ಪೋರ್ಟ್ ಪ್ರೊಸೆಸಿಂಗ್ ಝೋನ್"ಗಳ ಉತ್ಪಾದನಾ ಘಟಕಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಕಾರ್ಮಿಕರ ಮತ್ತು ವರ್ಷಾನುಗಟ್ಟಲೆ ಹಲವಾರು ರೀತಿಯ ಶೋಷಣೆಗಳನ್ನು ಎದುರಿಸುತ್ತಾ ಬಂದ ಕಾರ್ಮಿಕರ ಹಿತಾಸಕ್ತಿಗಾಗಿ ಇರುವ ಸಂಘಟನೆಗಳು. ವಿಶ್ವದ ಎಲ್ಲೆಡೆ ಈ ರೀತಿಯ ಕಾರ್ಖಾನೆಗಳಲ್ಲಿ ಏಕ ರೂಪದ ಗುಣಲಕ್ಷಣಗಳನ್ನು ಕಾಣಬಹುದು; ಅವೆಂದರೆ, ಕಡಿಮೆ ವೇತನ, ನಮ್ಮ ಆರೋಗ್ಯಕ್ಕೆ ಮತ್ತು ಪ್ರಾಣಕ್ಕೆ ಬೆದರಿಕೆ ಇರುವ ಕೆಲಸದ ವಾತಾವರಣ, ಗೌರವದ ಕೊರತೆ ಮತ್ತು ಕೆಲಸದ ಸ್ಥಳದಲ್ಲಿ ಕಾರ್ಮಿಕ ಸಂಘಟನೆಗಳ ಅನುಪಸ್ಥಿತಿ. ಈ ಪರಿಸ್ಥಿತಿಯು, ಕಾರ್ಮಿಕರ ಮೇಲಿನ ದೈಹಿಕ ಹಲ್ಲೆ, ಲೈಂಗಿಕ ಕಿರುಕುಳ, ಕಾನೂನು ಪ್ರಕಾರ ಬರಬೇಕಾದ ಹಣವನ್ನು ವಂಚಿಸಿ ಕಾರ್ಖಾನೆಗಳನ್ನು ಮುಚ್ಚುವುದು, ಪಿಂಚಣಿ ವ್ಯವಸ್ಥೆಯ ಕೊರತೆ ಅಥವಾ ಇತರ ಸಾಮಾಜಿಕ ಭದ್ರತೆಯ ಕೊರತೆಯಂತಹ ಗಂಭೀರ ಶೋಷಣೆಗಳಿಗೆ ಕಾರಣವಾಗುತ್ತಿದೆ. ಈ ಪರಿಸ್ಥಿತಿಯನ್ನು ಬದಲಿಸಲು ನಾವು ಒಟ್ಟಾದಾಗಲೆಲ್ಲ ಎಲ್ಲ ರೀತಿಯ ಸಂಘಟನಾ ವಿರೋಧೀ ನೀತಿಗಳನ್ನು ಅನುಸರಿಸಿ ನಮ್ಮನ್ನು ದಮನ ಮಾಡುತ್ತಾರೆ. ತಾರತಮ್ಯದ ನೀತಿಯಿಂದ ಹಿಡಿದು ನಮ್ಮ ವಿರುದ್ಧ ಕ್ರಮ ಕೈಗೊಳ್ಳುವುದು, ದೈಹಿಕ ಹಲ್ಲೆ ನಡೆಸುವುದು, ಬೆದರಿಕೆ ಒಡ್ಡುವುದೂ ಸೇರಿದಂತೆ ಕೊನೆಯಿಲ್ಲದ ಹಲವಾರು ಕಾರ್ಯತಂತ್ರ ರೂಪಿಸುತ್ತಾ ನಮ್ಮ ಹೋರಾಟವನ್ನು ತಡೆಯಲು ಯತ್ನಿಸುತ್ತಿದ್ದಾರೆ.

ಆದರೆ ಸಹೋದ್ಯೋಗಿಗಳೇ ಜಾಗೃತರಾಗಿ! ನಾವು ದೂರಬೇಕೆಂಬ ಉದ್ದೇಶಕ್ಕೆ ಮಾತ್ರ ದೂರುತ್ತಿಲ್ಲ, ಮೇಲೆ ಹೇಳಿರುವ ಕಷ್ಟಗಳ ನಡುವೆಯೂ ನಾವು, ದೃಢ ಸಂಕಲ್ಪದೊಂದಿಗೆ ಮತ್ತು ಬಹುಮಟ್ಟಿನ ತ್ಯಾಗದೊಂದಿಗೆ ಸಂಘಟಿತರಾಗುವಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ ಸಹೋದ್ಯೋಗಿಗಳಿಗೆ ನಮ್ಮ ಹಕ್ಕುಗಳ ಬಗ್ಗೆ ತಿಳಿಸಿಕೊಡುತ್ತಾ, ಮಾಲೀಕರೊಂದಿಗೆ ಸಾಮೂಹಿಕ ಚೌಕಾಸಿಯ ಒಪ್ಪಂದಕ್ಕಾಗಿ ವ್ಯವಹರಿಸುತ್ತಾ, ನಮ್ಮ ಸಹೋದ್ಯೋಗಿಗಳ ಮೇಲಾಗುವ ಎಲ್ಲ ರೀತಿಯ ದೌರ್ಜನ್ಯಗಳನ್ನು ವಿರೋಧಿಸಿ ಅವರ ಹಕ್ಕುಗಳಿಗಾಗಿ ಸರ್ಕಾರ ಮತ್ತು ನ್ಯಾಯಾಲಯಗಳಲ್ಲಿ ಹೋರಾಡುತ್ತಾ, ನಮ್ಮ ನೆಲದ ಕಾನೂನು ಮತ್ತು ಅಂತರಾಷ್ಟ್ರೀಯ ಸಮಾವೇಶಗಳಲ್ಲಿ ಮನ್ನಣೆ ಪಡೆದಿರುವ ಕಾನೂನುಗಳನ್ನು ಗೌರವಿಸುವಂತೆ ಒತ್ತಾಯಿಸುತ್ತಾ, ನಾವು ತಯಾರಿಸುವ ಬಟ್ಟೆಗಳನ್ನು ತೊಡುವ ಗ್ರಾಹಕರಿಗೆ ನಮ್ಮ ಧ್ವನಿಯನ್ನು ಕೇಳಿಸಲು ಅಂತರರಾಷ್ಟ್ರೀಯ ಒಕ್ಕೂಟಗಳನ್ನು ರಚಿಸುತ್ತಾ ನಮ್ಮ ಕಾರ್ಮಿಕ ಸಂಘಟನೆಗಳು ದಿನದಿಂದ ದಿನಕ್ಕೆ ಪಟ್ಟು ಬಿಡದೆ ದೃಢವಾಗಿ ಹೋರಾಡುತ್ತಿವೆ.

ಇದಕ್ಕೆಲ್ಲ ಒಂದು ಸರಳ ಪರಿಹಾರವಿದೆ. ಬಹುರಾಷ್ಟ್ರೀಯ ಬ್ರಾಂಡ್‌ಗಳು ನಮ್ಮ ನಿಜವಾದ ಯಜಮಾನರು ಮತ್ತು ಅವರು ಈ ಕೆಳಗಿನ ಹೊಣೆಗಾರಿಕೆಯನ್ನು ಹೊರಲೇ ಬೇಕಾಗಿದೆ.

ಬ್ರಾಂಡ್‌ಗಳು ತಮ್ಮ ಸಪ್ಲೈಯರ್ ಕಂಪನಿಗಳಿಗೆ ಕಡಿಮೆ ಬೆಲೆಗೆ ಉಡುಪು ತಯಾರಿಸಿ ಎಂದು ಒತ್ತಡ ಹಾಕುವ ಮೂಲಕ ನಮ್ಮ ವೇತನವನ್ನು ನಿಯಂತ್ರಿಸುತ್ತಿವೆ. ನಮಗೆ ಮತ್ತು ನಮ್ಮ ಕುಟುಂಬಕ್ಕೆ ಮಾನವೀಯ ರೀತಿಯಲ್ಲಿ ವೇತನ ನೀಡಲು ಸಾಧ್ಯವಾಗುವಂತೆ ಅವರು ನ್ಯಾಯಯುತ ಬೆಲೆಯನ್ನು ನಿಗದಿಪಡಿಸಬೇಕು. ತಮ್ಮ ಆರ್ಡರ್‌ಗಳನ್ನು ಬೇರೆ ಬೇರೆ ದೇಶಗಳಿಗೆ ನಿರಂತರವಾಗಿ ಬದಲಿಸುತ್ತಾ ಬ್ರಾಂಡ್‌ಗಳು ನಮಗೆ ಕೆಲಸ ಇರುವುದೋ ಇಲ್ಲವೋ ಎಂಬುದನ್ನು ನಿರ್ಧರಿಸುತ್ತವೆ. ಶಿಪ್‌ಮೆಂಟ್ ದಿನಾಂಕದ ಗಡುವು ನೀಡಿ, ನಾವು 8 ಗಂಟೆಯೊಳಗೆ ಮುಗಿಸಲಾಗದಂತಹ ಟಾರ್ಗೆಟ್ ನಿಗದಿ ಮಾಡುವ ಮೂಲಕ, ಹೆಚ್ಚು ಸಮಯ ಕೆಲಸ ಮಾಡುವುದನ್ನೂ ನಿರ್ಧರಿಸುತ್ತಿದ್ದಾರೆ. ನಮ್ಮ ಕಾರ್ಖಾನೆಗೆ ಸ್ಥಿರವಾಗಿ ಆರ್ಡರ್ ನೀಡುವುದನ್ನು ಅವರು ಖಾತ್ರಿ ಪಡಿಸಬೇಕು. ನಮ್ಮ ಕೆಲಸದ ಸ್ಥಳದಲ್ಲಿ ಮಾರಣಾಂತಿಕ ಅಪಾಯಗಳು ನಿರಂತರವಾಗಿ ಸಂಭವಿಸುತ್ತಿದ್ದಲ್ಲಿ, ಅದನ್ನು ತಡೆಯಲು ಅವಶ್ಯಕವಾದ ಕ್ರಮ ಕೈಗೊಳ್ಳಲು ಬೇಕಾದ ಹಣಸಹಾಯವನ್ನು ಬ್ರಾಂಡ್‌ಗಳು ಒದಗಿಸಬೇಕು.

ಲಭ್ಯವಿರುವ ಎಲ್ಲ ದಾರಿಗಳಲ್ಲಿಯೂ ನಾವು ನಮ್ಮ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಿದ್ದೇವೆ. ಕಾನೂನುಗಳು ಉಲ್ಲಂಘನೆ ಯಾದಾಗ ಸರ್ಕಾರಗಳಿಗೆ ನಾವು ವರದಿಮಾಡಿದ್ದೇವೆ. ಆದರೆ ಅವರು ಬಂಡವಾಳವನ್ನು ಕಳೆದುಕೊಳ್ಳುವ ಭಯದಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ನಿರಾಕರಿಸುತ್ತಿದ್ದಾರೆ. ಸಂಘಟನಾ ವಿರೋಧಿಯಾಗಿರುವ ಇಂತಹ ಒತ್ತಡದ ಪರಿಸ್ಥಿತಿಯ ನಡುವೆಯೂ ನಾವು ಕಾರ್ಮಿಕ ಸಂಘಟನೆಗಳನ್ನು ಕಟ್ಟಿ, ನಮ್ಮ ಮಾಲೀಕರೊಂದಿಗೆ ವ್ಯವಹರಿಸುತ್ತಿದ್ದೇವೆ. ಆದರೆ ಆ ಸಂದರ್ಭಗಳಲ್ಲಿ ಮಾಲೀಕರು ನಮ್ಮ ಬೇಡಿಕೆಗಳನ್ನು ಪೂರೈಸಲು ಬ್ರಾಂಡ್‌ಗಳು ಸಹಕರಿಸುವುದಿಲ್ಲ ಎಂದು ಒತ್ತಿ ಹೇಳುತ್ತಾರೆ ಮತ್ತು ನಮ್ಮ ಹಕ್ಕುಗಳಿಗಾಗಿ ಇದೇ ರೀತಿ ಆಗ್ರಹಿಸುತ್ತಿದ್ದರೆ, ಬ್ರಾಂಡ್‌ಗಳು ನಮಗೆ ಆರ್ಡರ್ ಕೊಡದೆ ಬಿಟ್ಟು ಹೋಗುತ್ತಾರೆ ಎಂದು ಬೆದರಿಸುತ್ತಾರೆ.

ಅವರದೇ "ಕೋಡ್ಸ್ ಆಫ್ ಕಂಡಕ್"ಗಳು ಉಲ್ಲಂಘನೆಯಾದಾಗ ನಾವು ಖುದ್ದಾಗಿ ಬ್ರಾಂಡ್‌ಗಳನ್ನೇ ಮಧ್ಯ ಪ್ರವೇಶಿಸುವಂತೆ ಕೇಳಿಕೊಂಡಿದ್ದೇವೆ. ಆದರೆ ಅವರು ನೆಪಗಳನ್ನು ಹೇಳುತ್ತಾ, ಕೆಲವೊಮ್ಮೆ ಪರಿಹಾರವನ್ನು ಒದಗಿಸಲು ನಿರಾಕರಿಸುತ್ತಾರೆ. ಹಾಗಾಗ್ಯೂ ನಿರ್ದಿಷ್ಟ ಸಮಸ್ಯೆಯನ್ನು ಅವರು ಬಗೆಹರಿಸಿದ ಸಂದರ್ಭದಲ್ಲಿ ಆ ಕಾರ್ಖಾನೆಯ ಎಲ್ಲ ಆರ್ಡರ್‌ಗಳನ್ನು ಹಿಂತೆಗೆದು ಕೊಳ್ಳುತ್ತಾರೆ ಮತ್ತು ಮತ್ತೊಂದು ಕಾರ್ಮಿಕ ಶೋಷಕ ಸಪ್ಲೈಯರ್‌ಗೆ ಕೊಡುವ ಮೂಲಕ ಈ ಕಾರ್ಖಾನೆಯ ಕಾರ್ಮಿಕರ ಮೇಲೆ ಒಟ್ಟಾಗಿ ಕ್ರಮ ಕೈಗೊಳ್ಳಲು ಅಥವಾ ಕಾರ್ಖಾನೆಯನ್ನು ಮುಚ್ಚಲು ಪ್ರೇರೇಪಿಸುತ್ತಾರೆ. ಜೊತೆಗೆ ತಮ್ಮ ಹಕ್ಕುಗಳನ್ನು ಕೇಳುವ ಧೈರ್ಯ ತೋರುವ ಕಾರ್ಮಿಕರಿಗೆ ಇದೊಂದು ಅನಿಷ್ಟಕರ ಎಚ್ಚರಿಕೆಯನ್ನೂ ರವಾನಿಸುತ್ತಾರೆ. ಯಾವುದೇ ಒಪ್ಪಂದಕ್ಕೆ ಬಾರದ, ಗಟ್ಟಿಯಾದ ನಿರ್ಧಾರ ತೆಗೆದುಕೊಳ್ಳದ ಲೆಕ್ಕಕ್ಕೇ ಸಿಗದಷ್ಟು ಸಂವಾದಗಳಲ್ಲಿ, ಶಿಷ್ಟಾಚಾರಗಳಲ್ಲಿ ನಾವು ಭಾಗವಹಿಸಿದ್ದೇವೆ. ಆದರೆ ಬ್ರಾಂಡ್‌ಗಳ 'ಕಾರ್ಪೊರೇಟ್‌ಗಳ ಸಾಮಾಜಿಕ ಹೊಣೆಗಾರಿಕೆ'ಯ ಪ್ರಯತ್ನದಿಂದಾಗಲೀ, ಅಥವಾ ಕಾರ್ಖಾನೆಗಳನ್ನು ನೋಡಿಕೊಳ್ಳಲು ಬ್ರಾಂಡ್‌ಗಳು ನೇಮಿಸುವ ಸಂಸ್ಥೆಗಳು ನಡೆಸುವ ಆಡಿಟ್‌ಗಳಿಂದಾಗಲಿ, ಯಾವುದೇ ಮೂಲಭೂತ ಬದಲಾವಣೆಯನ್ನೂ ನಾವು ಕಂಡಿಲ್ಲ.

ಬ್ರಾಂಡ್‌ಗಳ ಕರಾಳ ಕಬಂಧ ಬಾಹುಗಳು ನಮ್ಮ ಮಾಲೀಕರನ್ನು, ನಮ್ಮ ಸರ್ಕಾರಗಳನ್ನು ಮತ್ತು ನಮ್ಮ ಕೆಲಸದ ಪರಿಸ್ಥಿತಿಯನ್ನು ನಿಯಂತ್ರಿಸುತ್ತಿವೆ. ನಮ್ಮ ಜೀವನ–ಮೃತ್ಯುಗಳ ಬಗ್ಗೆ, ನಮ್ಮ ಗೌರವ–ವಿಪತ್ತುಗಳಂತಹ ಗಂಭೀರ ಸಮಸ್ಯೆಗಳ ಪರಿಹಾರಕ್ಕಾಗಿ, ಮುಖಾಮುಖಿ ಮಾತನಾಡಲು, ವ್ಯವಹರಿಸಲು ಏಕೆ ಅಸಾಧ್ಯವಾಗಿದೆ?

ಬ್ರಾಂಡ್‌ಗಳ ಸಪ್ಲೈಚೈನ್‌ನ ಭಾಗವಾಗಿ ಒಗ್ಗಟಾಗದೇ, ನಾವೆಲ್ಲರೂ ಪ್ರತ್ಯೇಕವಾಗಿ ಹೋರಾಡಲು ಪ್ರಯತ್ನಿಸಿದಾಗಲೆಲ್ಲಾ, ಬ್ರಾಂಡ್‌ಗಳು ನಮ್ಮನ್ನು ಅವರ ಚದುರಂಗದ ಆಟದ ಕಾಯಿಗಳಂತೆ ಪರಿಗಣಿಸಿ ನಮ್ಮತ್ತ ನಗುತ್ತಾರೆ. ಆದರೆ ನಾವೆಲ್ಲರೂ ಒಂದಾದಾಗ ಮಾತ್ರ ಇಂತಹ ಬಹುರಾಷ್ಟ್ರೀಯ ಶಕ್ತಿಗಳನ್ನು ನಾವು ಎದುರಿಸಬಹುದು. □



Scanned with OKEN Scanner

# ಕಾರ್ಮಿಕರಿಗೆ ತಿಳಿದಿರಲೇಬೇಕಾದ ಕೆಲವು ಕಾರ್ಮಿಕ ಕಾನೂನುಗಳು

**ಕೈಗಾರಿಕಾ ವ್ಯಾಜ್ಯ ಕಾಯ್ದೆ, 1947 (Industrial Dispute Act)**

- ಕಾರ್ಮಿಕರಿಗೆ ಉದ್ಯೋಗ ನೇಮಕಾತಿ ಪತ್ರವನ್ನು ನೀಡಬೇಕು.
- 240 ದಿನ ಕೆಲಸ ಮಾಡಿದ ಕಾರ್ಮಿಕರನ್ನು ಲಿಖಿತ ಕಾರಣ ನೀಡದೆ, ಕೆಲಸದಿಂದ ತೆಗೆಯುವಂತಿಲ್ಲ.
- ಕಾರ್ಮಿಕರು ಈ ಕ್ರಮವನ್ನು ಕಾರ್ಮಿಕ ನ್ಯಾಯಾಲಯದಲ್ಲಿ/ ಇಲಾಖೆಯಲ್ಲಿ ಪ್ರಶ್ನಿಸಬಹುದು.
- ಕೆಲಸದ ಸ್ಥಳದ ಸಮಿತಿಗಳನ್ನು ರಚಿಸಬೇಕು (ಕುಂದುಕೊರತೆಗಳ ಸಮಿತಿ, ಕ್ಯಾಂಟೀನ್ ಸಮಿತಿ, ಲೈಂಗಿಕ ಕಿರುಕುಳ ವಿರೋಧೀ ಸಮಿತಿ)
- ಒಂದು ವಾರ ಮುಂಚೆಯೇ ಲಿಖಿತವಾಗಿ ತಿಳಿಸಿ ಮುಷ್ಕರಗಳು ಮತ್ತು ಲಾಕೌಟ್‌ಗಳು ನಡೆಸುವುದು
- ಕಾರ್ಖಾನೆಯನ್ನು ಮುಚ್ಚುವ ಸಂದರ್ಭದಲ್ಲಿ ಕಾರ್ಮಿಕರಿಗೆ ಪರಿಹಾರ ನೀಡಬೇಕು.
- ಸಾಮೂಹಿಕ ರಾಜೀನಾಮೆ ಪಡೆದ ಸಂದರ್ಭದಲ್ಲಿ ಪರಿಹಾರ
- 11 ಕಿ.ಮೀ.ಗಿಂತ ದೂರಕ್ಕೆ ಕಾರ್ಖಾನೆ ಸ್ಥಳಾಂತರವಾದಾಗ ವಾಹನ ಸೌಲಭ್ಯ ಅಥವಾ ಸಾರಿಗೆ ವೆಚ್ಚ ನೀಡಬೇಕು.

**ಕನಿಷ್ಠ ಕೂಲಿ ಕಾಯಿದೆ, 1948 (Minimum Wages Act)**

- ಸರ್ಕಾರ ಕಾಲಕಾಲಕ್ಕೆ ನಿಗದಿ ಪಡಿಸುವ ಕನಿಷ್ಠ ವೇತನವನ್ನು ನೀಡಲೇಬೇಕು. ತಪ್ಪಿದಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಬಹುದು ಮತ್ತು 10 ಪಟ್ಟು ದಂಡ

**ಹೆರಿಗೆ ಸೌಲಭ್ಯ ಕಾಯಿದೆ, 1961 (Maternity Benefit Act)**

- ಮಹಿಳಾ ಕಾರ್ಮಿಕರಿಗೆ 3 ತಿಂಗಳ ವೇತನ ಸಹಿತೆ ರಜೆ ನೀಡಬೇಕು
- ಅವಶ್ಯವಿದ್ದಲ್ಲಿ 1 ತಿಂಗಳ ವೇತನ ರಹಿತ ರಜೆ ನೀಡಬೇಕು.
- ಇ.ಎಸ್.ಐ. ಇರುವವರಿಗೆ ಇದು ಅನ್ವಯವಾಗುವುದಿಲ್ಲ.

**ಬೋನಸ್ ಪಾವತಿ ಕಾಯಿದೆ, 1965 (Payment of Bonus Act)**

- ವಾರ್ಷಿಕ ವೇತನದಲ್ಲಿ ಕನಿಷ್ಠ 8.33% ಗರಿಷ್ಠ 20%
- ಬೋನಸ್ ಲೆಕ್ಕ ಹಾಕುವುದು ಏಪ್ರಿಲ್ 1 ರಿಂದ ಮಾರ್ಚ್ 31
- ಪ್ರತಿವರ್ಷ ನವೆಂಬರ್ ಒಳಗೆ ಬೋನಸ್ ಅನ್ನು ಪಾವತಿಸಬೇಕು.
- 30 ದಿನ ಕೆಲಸ ಮಾಡಿದ ಕಾರ್ಮಿಕರು ಕೆಲಸ ಬಿಟ್ಟಿದ್ದರೂ ಅವರಿಗೆ ಬೋನಸ್ ಅನ್ನು ಪಾವತಿಸಲೇಬೇಕು.

**ಕಾರ್ಮಿಕ ಕಲ್ಯಾಣವಂತಿಗೆ ಕಾಯ್ದೆ, 1965**

- ಕಾರ್ಮಿಕರಿಂದ 3 ರೂ. ಹಾಗೂ ಮಾಲೀಕರು 6 ರೂ.ಗಳು ಹಾಗೂ ಸರ್ಕಾರ 3 ರೂ.ಗಳನ್ನು ಸೇರಿಸಿ ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಗೆಯನ್ನು ಪಾವತಿಸಲಾಗುತ್ತದೆ.
- ಕಾರ್ಮಿಕರು ಪಡೆದಿಲ್ಲದ ಬೋನಸ್ ಹಣವನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿಸಬೇಕು.
- ಇದರಿಂದ ಕಾರ್ಮಿಕರ ಅನೇಕ ಕಲ್ಯಾಣ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತದೆ (ವಿದ್ಯಾರ್ಥಿವೇತನ, ಕಾರ್ಮಿಕರ ಅಂತ್ಯಸಂಸ್ಕಾರ ಖರ್ಚು, ಅವಲಂಬಿತರ ಅಂಗವಿಕಲತೆ ಮತ್ತು ಅನಾರೋಗ್ಯಕ್ಕೆ ಖರ್ಚು, ವಿವಿಧ ತರಬೇತಿಗಳು, ಸಮುದಾಯ ಭವನ, ವೈದ್ಯಕೀಯ ತಪಾಸಣಾ ಶಿಬಿರಗಳು)

**ಗ್ರಾಚುಟಿ ಕಾಯಿದೆ, 1972 (Gratuity Act)**

- 5 ವರ್ಷ ಕೆಲಸ ಮಾಡಿದ ಕಾರ್ಮಿಕರು ಗ್ರಾಚುಟಿ ಪಡೆಯಲು ಅರ್ಹರಾಗುತ್ತಾರೆ.
- ಪ್ರತಿ ವರ್ಷಕ್ಕೆ 15 ದಿನಗಳ ವೇತನ

**ಗ್ರಾಚುಟಿಯನ್ನು ಲೆಕ್ಕ ಹಾಕುವ ಸೂತ್ರ**

- ಒಟ್ಟು ಸೇವೆಯ ವರ್ಷ X 15 X ಕಡೆಯಲ್ಲಿ ತೆಗೆದುಕೊಂಡ ವೇತನ ÷ 100

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 376/ಹೆಚ್ ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039.
ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ

ಮೊ: 9686229761, 9901290495

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು – 560 026.
   ದೂ: 080–26745242
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು–560 009
   ದೂ.: 22216485
3. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ
   ಎಚ್. ಸಿದ್ಧಯ್ಯ ರಸ್ತೆ
   ಬೆಂಗಳೂರು–27

**ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ**

ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.
ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ

ಸಂಪಾದಕ ಮಂಡಳಿ–ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 376/H, ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner